
# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ – 2022




ಬಿಡಿ ಪ್ರತಿ: ರೂ. 10/-

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 39
ಸಂಚಿಕೆ - 4
ಜನವರಿ- 2022

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ಗೋಧಿ ಬಣ್ಣ – (ಅ)ಸಾಧಾರಣ... | ಗಣೇಶ ಹೆಗಡೆ | 6 |
| ರಾಶಿ ದರ್ಶನ | ಸಂಪಟೂರು ವಿಶ್ವನಾಥ | 9 |
| ನನ್ನಾಕೆಯ ಸುತ್ತ | ಕೆ. ರಮೇಶ | 10 |
| ನೀತಿಕಥೆಗಳು ಕಥಾ ಸ್ಪರ್ಧೆ | | |
| ಇರುವೆ ಮತ್ತು ಮಿಡಿತೆ | ಶಿವು | 13 |
| ಅಜ್ಜನಿಗೆ ಸಾಧ್ಯವಾಗದೇ .... | ಬೇಲೂರು ರಾಮಮೂರ್ತಿ | 15 |
| ನರಿ ಮತ್ತು ಹುಳಿ ದ್ರಾಕ್ಷಿ | ಆನಂದ | 17 |
| ಪ್ರತ್ಯುನ್ನತಿ ಮತ್ತು ..... | ಜಯಶ್ರೀ ದೇಶಪಾಂಡೆ | 19 |
| ಸುಳ್ಳು ಮತ್ತು ಎಚ್ಚರಿಕೆ! | ಗೌತಮ | 21 |
| ಮೀನಾಕುಮಾರಿ ಮತ್ತು ಮಿ. AD | ಚಿತ್ರಾ ರಾಮಚಂದ್ರನ್ | 23 |
| ನಿಮ್ಮ ಚಪ್ಪಲಿಗೆ ನೀವೇ ಜವಾಬ್ದಾರರು | ಅನಿತಾ ನಾಡಿಗ್ | 27 |
| ತುಂತುರು | ದನಂಅ | 32 |
| ಇರುವುದೆಲ್ಲವ ಬಿಟ್ಟು | ಲತಾ ಹೆಗಡೆ | 34 |
| ದೇಖೋ ಬೇಟಾ... | ಗುಂಡೂ ರಾವ್ ದೇಸಾಯಿ | 37 |


ಮುಖಪುಟ : **ಜೆ. ಬಾಲಕೃಷ್ಣ**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

**ದೇಶದ ರಕ್ಷಣೆಗಾಗಿ ಜೀವನದುದ್ದಕ್ಕೂ ಖ್ಯಾತಿ ಪಡೆದಿದ್ದ ಜನರಲ್ ಬಿಪಿನ್ ರಾವತ್ ಅವರ ಆತ್ಮಕ್ಕೆ ಚಿರ ಶಾಂತಿ ದೊರೆಯಲಿ ಎಂದು ಅಪರಂಜಿ ಕಂಬನಿ ಸುರಿಸಿದಳು !**

****

ಕಾನೂನು ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಮುತ್ತಿಗೆ – ಪತ್ರಿಕೆ

**ಅವರೆಲ್ಲ ಕಾನೂನನ್ನು ತಮ್ಮ ಕೈಗಳಿಗೇ ತೆಗೆದುಕೊಂಡಂತಿದೆ !!**

****

ರಾಜ್ಯಕ್ಕೆ ತಪ್ಪಿತು 600 ವೈದ್ಯಕೀಯ ಸೀಟುಗಳು – ಸುದ್ದಿ

**ಅಷ್ಟು ಜನ ಬಚಾವಾದರಲ್ಲಾ ಸಧ್ಯ !!**

****

ಒಂದೇ ದಿನದಲ್ಲಿ ಭೂ– ಪರಿವರ್ತನೆ – ಹೇಳಿಕೆ

**ಭೂ–ಮಾತೆ ಬೆಚ್ಚಿ ಬಿದ್ದಳಂತೆ !!**

****

ರಾತ್ರಿ ಕರ್ಫ್ಯೂ ; ಮುಂದಿನ ವಾರ ನಿರ್ಧಾರ –ಪತ್ರಿಕೆ

**ಶ್!!! ಜೋರಾಗಿ ಹೇಳಬೇಡಿ, ಓಮಿಕ್ರೋನ್ಗೆ ಕೇಳಿಸೀತು !!**

****

ಮಾನವ ಹಕ್ಕುಗಳ ದಿನಾಚರಣೆ – ಪತ್ರಿಕೆ

**ಇದು ಆದಿಮಾನವನ ಕಾಲದಿಂದಲೂ ಇರಬಹುದೇ ಅಂತ ವಿಜ್ಞಾನಿಗಳು ಸಂಶೋಧನೆ ಮಾಡುತ್ತಾರೋ ?!**

****

ಲಂಚಾವತಾರ ವಿಸ್ತಾರ – ದಿನ ಪತ್ರಿಕೆ

**ಮಾಸ್ಟರ್ ಹಿರಣ್ಣಯ್ಯನವರ ನೆನೆಪು ಮರುಕಳಿಸಿ ಬರುತ್ತಿದೆ !**

****

ಹಾಸ್ಯಪ್ರಧಾನ ಮಾತನಾಡುವುದೂ ಕಷ್ಟ ಎನಿಸುತ್ತಿದೆ

– ಪ್ರೊ. ಕೃಷ್ಣೇ ಗೌಡರು

**ನಮಗೂ ಹಾಗೇ ಅನಿಸುತ್ತಿದೆ !!**

****

# "ನಮ್ಮ ನಿಮ್ಮಲ್ಲಿ"

● ಶಿವಕುಮಾರ್




ಶ್ರೀಮತಿ ರಾಜೇಶ್ವರಿ ತೇಜಸ್ವಿಯವರ ನಿಧನದ ಸುದ್ದಿ ಕೇಳಿದಾಗ ತೇಜಸ್ವಿ ದಂಪತಿಗಳೊಡನೆ ನನಗಿದ್ದ ಆಪ್ತ ಸಂಪರ್ಕ ಮತ್ತು ಒಡನಾಟದ ದಿನಗಳ ನೆನಪುಗಳು ಮರುಕಳಿಸಿದವು. ನಾನು ಮೊದಲ ಬಾರಿ ಅವರ ಮನೆ "ನಿರುತ್ತರ" ಕ್ಕೆ ಭೇಟಿ ನೀಡಿದಂದು ಅವರ ಮನೆಯ ವಿಶಾಲವಾದ ಹಜಾರದಲ್ಲಿ ನಾವೆಲ್ಲಾ ಕುಳಿತಿದ್ದೆವು. ಮಂಗಳೂರು ಹೆಂಚನ್ನು ಹೊದಿಸಿದ್ದ ಜಾರುಮಾಡು ಬಹು ಎತ್ತರದಲ್ಲಿದ್ದುದರಿಂದ ಮನೆಯೊಳಗೆ ತಂಪಾಗಿತ್ತು. ನನ್ನ ಮುಂದಿನ ಹಾಗೂ ಎಡ ಪಕ್ಕದ ಗೋಡೆಗಳಲ್ಲಿನ ಕಿಟಕಿಗಳ ಮೂಲಕ ಕಾಫಿ ಗಿಡಗಳು, ತೋಟದ ನೀರಾವರಿಗಾಗಿ ನಿರ್ಮಿಸಿದ ಕೆರೆ, ಮನೆ ತೋಟದ ಹೂವಿನ ಗಿಡಗಳು ಎಲ್ಲ ಕಾಣುತ್ತಿದ್ದವು. ನನ್ನ ಕುರ್ಚಿಯ ಪಕ್ಕದಲ್ಲೇ ಒಂದು ಪುಸ್ತಕದ ಶೆಲ್ಫ್. ಅದರಲ್ಲಿ ಪುಸ್ತಕ ಪ್ರಕಾಶನದ ಎಲ್ಲ ಪುಸ್ತಕಗಳನ್ನೂ ವಾರಣವಾಗಿ ಜೋಡಿಸಿಟ್ಟಿತ್ತು. ಶೆಲ್ಫಿನ ಮೇಲೆ ಪೂಜ್ಯ ಕುವೆಂಪುರವರ ಫೋಟೋ ಜೊತೆಗೆ ಅಕಾಡೆಮಿ ಮತ್ತು ಇನ್ನಿತರ ಪ್ರಶಸ್ತಿಗಳಂತೆ ಕಾಣುತ್ತಿದ್ದ ಅನೇಕ ಕಂಚಿನ ನಟರಾಜ ಪ್ರತಿಮೆಗಳು ಇದ್ದವು. ಹಿಂದಿನ ಬಿಳಿಯ ಗೋಡೆಯನ್ನು ಶಾರದಾ ದೇವಿ, ರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರ ಫೋಟೋಗಳು ಅಲಂಕರಿಸಿದ್ದವು. ಹಜಾರದ ಆಚೆಮೂಲೆಯಲ್ಲಿ ಒಂದು ದೊಡ್ಡ ಮೇಜು. ಇದು ತೇಜಸ್ವಿಯವರ ವರ್ಕ್ ಟೇಬಲ್. ಆ ಮೇಜಿನ ಮೇಲೆ ಅನೇಕ ಪುಸ್ತಕಗಳು, ಆರ್ಟ್‌ವರ್ಕ್‌ಗಳು ಮತ್ತು ಡಿಸ್ಕೆಟ್‌ಗಳು ಒಂದರಮೇಲೊಂದು ಬಿದ್ದು ಜಾಗಕ್ಕಾಗಿ ಹೆಣಗುತ್ತಿದ್ದವು.

ಹಿಂದಿನ ಮಧ್ಯಾಹ್ನ ನಾನು ಮಂಗಳೂರಿನಿಂದ ತೇಜಸ್ವಿಯವರೊಂದಿಗೆ ಮಾತನಾಡಿದಾಗ "ನಾಳೆ ಬೆಳಗ್ಗೇನೆ ಬಂದುಬಿಡಿ. ಶ್ರೀರಾಮ್ ಬಂದಿರ್ತಾರೆ. ಹ್ಯಾಂಡ್‌ಪೋಸ್ಟ್ ಹತ್ತಿರ ರಿಕ್ವೆಸ್ಟ್ ಸ್ಟಾಪ್ ಇದೆ " ಅಂತ ಆತ್ಮೀಯತೆಯಿಂದ ಆಹ್ವಾನಿಸಿದ್ದರು. ನಾನು ಬೆಳಗ್ಗೆ ಐದೂವರೆಗೇ ಎದ್ದು ಬೆಳಗಾಂ ಬಸ್ ಹತ್ತಿದ್ದೆ. ಉಜಿರೆ ದಾಟಿದಮೇಲೆ ಚಾರ್ಮಾಡಿ ಘಾಟ್ ರಸ್ತೆ ಪ್ರಾರಂಭ. ಪಶ್ಚಿಮ ಘಟ್ಟಗಳ ದೈತ್ಯ ಮರಗಳ ನಡುವೆ ಬೆಳಗಿನ ಸೂರ್ಯನ ಕಿರಣಗಳ ಕಣ್ಣುಮುಚ್ಚಾಲೆ ನಡೆದಿತ್ತು. ಹಸಿರು ಪ್ರಪಾತಗಳು, ಕಡಿದಾದ ಬಂಡೆಗಳು, ಹೇರ್‌ಪಿನ್ ತಿರುವುಗಳು, ಇವೆಲ್ಲವನ್ನೂ ಒಳಗೊಂಡಿದ್ದ ಈ "ಜುಗಾರಿಕ್ರಾಸ್" ರಂಗಸ್ಥಳದ ದೃಶ್ಯವನ್ನು ಕಣ್ಣುತುಂಬಾ ಹೀರುತ್ತಿದ್ದಂತೆಯೇ ದಖನ್ ಪ್ರಸ್ಥಭೂಮಿಯ ಸಮತಲವನ್ನು ತಲುಪಿದ್ದೆವು. ಜೇನುಹಟ್ಟಿ

ಅಂತಲೋ ಅಥವಾ ಇನ್ನಾವುದೋ ಹೆಸರಿನ ಹಳ್ಳಿಯಲ್ಲಿ ದಾರಿ ಪಕ್ಕದ ದೇವಸ್ಥಾನದ ಪೂಜಾರಿ ಬಸ್ಸು ನಿಲ್ಲಿಸಿ ಆರತಿ ತಟ್ಟೆಗೆ ಕಾಣಿಕೆ ಹಾಕಿಸಿಕೊಂಡ. ಅಲ್ಲಿಂದ ಸ್ವಲ್ಪ ಪ್ರಯಾಣದ ನಂತರ ಕಂಡಕ್ಟರ್ "ಹ್ಯಾಂಡ್‌ಪೋಸ್ಟ್ ಬಂತು ಇಳೀರೀ " ಅಂತ ಹೇಳಿ ಬಸ್ ನಿಲ್ಲಿಸಿದಾಗ ಬೇಗನೆ ಇಳಿದಿದ್ದೆ. ಕೆಲವು ಅಂಗಡಿಗಳು, ಒಂದು ಆಟೋ ಇಷ್ಟೇ ಅಲ್ಲಿದ್ದದ್ದು. ಆ ಆಟೋ ಡ್ರೈವರ್ "ತೇಜಸ್ವಿಯವರ ಮನೆ ಗೇಟ್ ತನಕ ಬಿಡುತ್ತೇನೆ ಒಳಗೆ ಬರುಲ್ಲ " ಅಂದ. ಯಾರ ಮನೆಗೆ ಹೋಗಬೇಕಾದರೂ ಗೇಟ್ ತನಕತಾನೇ ಹೋಗೋದು ಅಂದ್ಕೊಂಡು ಆಟೋ ಹತ್ತಿದೆ. ಐದು ನಿಮಿಷದ ಹಾದಿ. ಗೇಟ್ ಬಳಿ ಇಳಿದು ಒಳಗೆ ಹೋದೆ.

ಗೇಟನ್ನು ದಾಟಿದೊಡನೆ ಯಾವುದೋ ಕಾಡಿನಲ್ಲಿದ್ದಂತೆ ಭಾಸವಾಯಿತು. ಕಾಫಿ ಗಿಡಗಳು, ಇನ್ನಿತರ ಗಿಡಮರಗಳು ದಟ್ಟವಾಗಿ ಹಬ್ಬಿದ್ದವು. ಅವುಗಳ ಮಧ್ಯೆ ಒಂದು ಜೋಡಿ ಕಾಲುಹಾದಿ. ಮರಗಿಡಗಳ ನೆರಳಿನಲ್ಲಿ ಸಾಗಿದ್ದ ಆ ದಾರಿಯಲ್ಲಿ ನಡೆಯುತ್ತಿದ್ದಾಗ ಕಾಡಿನ ಹಕ್ಕಿಗಳ ವೈವಿಧ್ಯಮಯ ಕಲರವ ತೋಟವನ್ನು ತುಂಬಿತ್ತು. ಐದು ನಿಮಿಷದ ನಡಿಗೆಯ ನಂತರ ದೂರದಲ್ಲಿ ಹೂಗಿಡಗಳ ಮಧ್ಯೆ ಮಂಗಳೂರು ಹೆಂಚಿನ ಕುಟೀರವೊಂದು ಕಣ್ಣಿಗೆ ಬಿತ್ತು. ಬಗೆ ಬಗೆಯಾದ ಹೂವಿನ ಗಿಡಗಳನ್ನು ಬಳಸಿ ನಡೆದು ಮನೆಯ ಹಜಾರ ಪ್ರವೇಶಿಸಿದೆ. ನನ್ನನ್ನು ನಗುಮುಖದಿಂದ ಇದಿರುಗೊಂಡ ವ್ಯಕ್ತಿ ತೇಜಸ್ವಿಯೇ ಇರಬೇಕೆಂದು ಅವರ ಗಡ್ಡ ನೋಡಿ ನಿರ್ಧರಿಸಿದೆ. ತೇಜಸ್ವಿ ನನ್ನನ್ನು ಬಹು ಆದರದಿಂದ ಸ್ವಾಗತಿಸಿದರು. " ರಾಜೇಶ್, ಇದು ಚೈತ್ರನ ಫ್ರೆಂಡ್ ಶಿವಕುಮಾರ್, ಸೈಕಲ್‌ವಾಲಾ ಬರೆದೋರು ಇವರೇ " ಅಂತ ನನ್ನನ್ನು ಅವರ ಪತ್ನಿ ಶ್ರೀಮತಿ ರಾಜೇಶ್ವರಿಯವರಿಗೆ ಪರಿಚಯಿಸಿದರು. ಆ ಮೊದಲ ಭೇಟಿಯಲ್ಲಿ ಮೂಡಿದ ಆತ್ಮೀಯತೆ, ಭ್ರಾತೃಭಾವ ಕಾಲಕಳೆದಂತೆ ಹೆಚ್ಚುತ್ತಾ ಹೋಯಿತು. ಅಂದಿನಿಂದ



"ನಿರುತ್ತರ" ದಲ್ಲಿ ಶ್ರೀಮತಿ ರಾಜೇಶ್ವರಿಯವರು ತೆಗೆದ ಫೋಟೋ.
ಬಲ ತುದಿಯಲ್ಲಿ ನನ್ನ ಮಿತ್ರ ಸಿ.ಆರ್. ಶಿವಕುಮಾರ್.

ವರ್ಷಕ್ಕೊಮ್ಮೆ ಮಳೆಗಾಲದಲ್ಲಿ ತಪ್ಪದೇ ಅವರ ಮನೆಗೆ ಹೋಗುತ್ತಿದ್ದೆ. ಕಂಪ್ಯೂಟರನ್ನು ಕನ್ನಡ ಪುಸ್ತಕಗಳ ಪ್ರಕಾಶನಕ್ಕೆ ಸಮರ್ಥವಾಗಿ ಬಳಸುವ ಪ್ರಯತ್ನದಲ್ಲಿ ಅವರು ನನ್ನ ಸಹಾಯವನ್ನು ಕೋರಿದ್ದರು. ತೇಜಸ್ವಿಯವರು ನನ್ನ ಅನೇಕ ಪುಸ್ತಕಗಳಿಗೆ ರಕ್ಷಾಪುಟದ ಚಿತ್ರಗಳನ್ನು ಬರೆದು ಆ ಪುಸ್ತಕಗಳನ್ನು ತಾವೇ ಪ್ರಕಟಿಸಿದ್ದರು.

ತೇಜಸ್ವಿಯವರೊಂದಿಗಿನ ಪ್ರತಿಯೊಂದು ಭೇಟಿಯೂ ಒಂದು ಚೇತೋಹಾರಿಯಾದ ಅನುಭವವೆಂದೇ ಹೇಳಬಹುದು. ಅವರ ವಿಚಾರ ಲಹರಿಯಲ್ಲಿ ಸತತವಾಗಿ ಹೊಸ ದೃಷ್ಟಿಕೋನಗಳು ಮಿಂಚುತ್ತಿದ್ದವು. "ಮಾಯಾಲೋಕ"ಪುಸ್ತಕವನ್ನು ಬರೆಯುವುದಕ್ಕೆ ಅನೇಕ ತಿಂಗಳುಗಳ ಮುಂಚೆಯೇ ಆ ಪುಸ್ತಕದ ದನಿ, ಶೈಲಿಗಳ ಬಗ್ಗೆ ಮಾತನಾಡುತ್ತಾ, "ನಮ್ಮ ಪರಿಸರದಲ್ಲಿ ದಿನನಿತ್ಯ ನಡೆಯುವ ಪ್ರತಿಯೊಂದು ಕ್ರಿಯೆಗೂ ಮಿಕ್ಕೆಲ್ಲ ಘಟನೆಗಳೊಂದಿಗೆ ಒಂದು ಕನೆಕ್ಟಿವಿಟಿ ಇರುತ್ತೆ. ಇಲ್ಲಿ ಒಂದು ಚಿಟ್ಟೆ ರೆಕ್ಕೆ ಬಡಿದರೆ ಫಿಲಿಪೀನ್ಸ್‌ನಲ್ಲಿ ಸುನಾಮಿ ಅನ್ನೋ ಮಾತು ಕೇಳಿದ್ದೀರಲ್ಲಾ ಹಾಗೆ" ಅಂತ ತೇಜಸ್ವಿ ಹೇಳಿದ್ದರು.

ತೇಜಸ್ವಿ ದಂಪತಿಗಳ ಒಡನಾಟ ಮತ್ತು ಸ್ನೇಹ ನನಗೆ ದೊರಕಿದ ಒಂದು ಅಪೂರ್ವ ಸೌಭಾಗ್ಯ. ಶ್ರೀಮತಿ ರಾಜೇಶ್ವರಿಯವರ ಅಗಲುವಿಕೆ ಈ ಸವಿನೆನಪುಗಳನ್ನು ಮರೆಸಲು ಸಾಧ್ಯವಿಲ್ಲ. ಆವರ ಆತ್ಮಕ್ಕೆ ಶಾಂತಿಯಿರಲಿ. ■

---

**ಲಕ್ಷ್ಮಣ್ ಕೊರವಂಜಿ**

**ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.**

**ಅವುಗಳಲ್ಲಿ ಇದೂ ಒಂದು – ನಿಮಗಾಗಿ.**



"ಸೀಗೇಕಾಯಿ ಬೆಲೆ ಹೀಗೆ ಏರುತ್ತಿರುವಾಗ ನೀವು ಮೀಸೆ ಬೇರೆ ಬಿಟ್ಟದೀರಲ್ಲಾ ! ಏನು ಹೇಳೋಣ ?"

# ಗೋಧಿ ಬಣ್ಣ–(ಅ)ಸಾಧಾರಣ ಮೈ ಕಟ್ಟು

**● ಗಣೇಶ ಹೆಗಡೆ**

"ಹಲೊ...ಡಾ.ತೋಲಾಂಡರಾವ್ ಸ್ಪೀಕಿಂಗ್. ಯಾರು ಮಾತನಾಡ್ತಿರೋದು?"

"ನಾನು ಡಾಕ್ಟರ್. ನಿಮ್ಮ ಫ್ರೆಂಡ್ ದೇವೋಜಿ ರಾಯರ ಸೊಸೆ"

"ಏನಮ್ಮ ಮನೇಲಿ ಎಲ್ಲಾ ಸೌಖ್ಯ ತಾನೆ?"

"ಇಲ್ಲ ಡಾಕ್ಟರ್, ನಮ್ಮೆಜಮಾನರು ಈಚಿನ ದಿನಗಳಿಂದ ಹೇಗೆ ಹೇಗೊ ಆಡ್ತಿದ್ದಾರೆ. ನನಗೆ ತುಂಬಾ ಭಯವಾಗ್ತಿದೆ."

"ಹೆದರ್ಕೊಬೇಡಮ್ಮ, ಹಾಳು ಕರೋನ ಕಾರಣದಿಂದ ಈಗ ನಾನು ಕ್ಲಿನಿಕ್ಕಿನ ಬಾಗಿಲು ತೆರೆಯುತ್ತಿಲ್ಲ. ಫೋನಿನಲ್ಲೇ ಕನ್ಸಲ್ಟೇಷನ್ ಕೊಡ್ತಿದೀನಿ, ಡಿಟೈಲಾಗಿ ಕೇಸ್ ಹಿಸ್ಟರಿ ಹೇಳು. ಅಂಥಹದ್ದೇನಾದರೂ ಸೀರಿಯಸ್ ಅನ್ನಿಸಿದ್ರೆ ಆಸ್ಪತ್ರೆಗೆ ಅಡ್ಮಿಟ್ ಮಾಡಿಸೋಣ".

"ಎಸ್ ಡಾಕ್ಟರ್, ನಮ್ಮ ಮನೇಲಿ ಎರಡು ಟಿ ವಿ ಇಟ್ಕೊಂಡಿದ್ದೇವೆ. ನನಗೋ ಸೀರಿಯಲ್ ಹುಚ್ಚು ಯಜಮಾನರಿಗೆ ಕನ್ನಡ ನ್ಯೂಸ್ ಹುಚ್ಚು. ಅದಕ್ಕೆ ಈ ಅರೇಂಜ್‌ಮೆಂಟ್. ಇತ್ತೀಚಿಗೆ ಸಿಂಧಗಿ–ಹಾನಗಲ್ ವಿಧಾನಸಭೆ ಬೈ ಎಲೆಕ್ಷನ್ ಅನೌನ್ಸ್ ಆಗುವವರೆಗೂ ಇವರು ಆರೋಗ್ಯವಾಗೇ ಇದ್ದರು. ನಂತರದ ದಿನಗಳಲ್ಲಿ ಇವರ ಬಿಹೇವಿಯರ್‍ನಲ್ಲಿ ಸಾಕಷ್ಟು ಬದಲಾವಣೆಗಳು, ಏರು ಪೇರುಗಳು ಕಂಡವು"

"ಇದನ್ನ ಬೈ ಎಲೆಕ್ಷನ್ ಅಂತ ಯಾರಮ್ಮ ಕರೀತಾರೆ? ಆಗಿದ್ದು ಬೈಗುಳ ಎಲೆಕ್ಷನ್....ಮುಂದುವರೆಸಮ್ಮ"

"ಆ ದಿನಗಳಲ್ಲಿ ಇವರು ತೀರಾ ಮಂಕಾಗಿರುವುದು ಕಂಡಿತು. ಕಾಫಿ ಲೋಟ ಕೈ ಹಿಡಿದಾಗ ಕೈ ಸಣ್ಣಗೆ ಕಂಪಿಸುತ್ತಿರುವುದು ಸ್ಪಷ್ಟವಾಯ್ತು. ಜತೆಗೆ ಶರ್ಟಿನ ಗುಂಡಿಗಳನ್ನು ಹಾಕಿಕೊಳ್ಳಲು ಪ್ರಯಾಸ ಪಡುತ್ತಿದ್ದಾರೇನೊ ಅಂತ ಅನ್ನಿಸಿತು"

"ಒಂದ್ನಿಮಿಷ ನಿಮ್ಮ ಟಿ.ವಿ. ವಾಲ್ಯೂಂ ಅನ್ನು ಮ್ಯೂಟ್ ಮಾಡ್ಕೊಳೀಮ್ಮ. ಈ ಖಾಯಿಲೆಗೆ 'ಪಾರ್ಕಿನ್‌ಸನ್ ಡಿಸೀಸ್' ಅಂತಾರೆ. ಖಾಯಿಲೆ ಮೊದಲನೇ ಹಂತದಲ್ಲಿದೆ.

"ಟ್ರ್ಯೂ ಡಾಕ್ಟರ್. ನನಗೂ ಇದರ ಬಗ್ಗೆ ಗುಮಾನಿ ಇತ್ತು. ಈಗ ಕ್ಲಾರಿಫೈ ಆಯ್ತು. ಈಚೀಚೆಗೆ ಇವರು ತಮ್ಮ ಮಗ 'ಪುಟ್ಟ'ನ ಜತೆ ಮನೆಯ ಹತ್ತಿರದ ಪಾರ್ಕಿನಲ್ಲಿ ತಾಸು ಗಟ್ಲೆ ಕುಳಿತುಕೊಳ್ತೋರು. ಒಮ್ಮೊಮ್ಮೆ ನನ್ನ ಜತೆ ಮಾರ್ಕೆಟ್ಟಿಗೆ ಬಂದರೆ ಕಾರನ್ನು ಎಲ್ಲೊ ಪಾರ್ಕು ಮಾಡಿ, ವಾಪಸು ಬರುವಾಗ ಪಾರ್ಕು ಮಾಡಿದ ಜಾಗವೇ ಮರೆತು ಹೋಗಿ ಪದ್ದಾಡೋರು...ಇದೇ ಅಲ್ವೇ ಪಾರ್ಕಿನ್ಸನ್ ಖಾಯಿಲೆ ಅಂದ್ರೆ.."

"ಛೇ..ಛೇ..ದಯವಿಟ್ಟು ನಿಲ್ಸೀಮ್ಮಾ. ನಾನು ಹೇಳಿರುವ ಖಾಯಿಲೆ ಹೆಸರಿಗೂ ನೀವು ಹೇಳುತ್ತಿರುವ ವಿಷಯಗಳಿಗೂ ಯಾವುದೇ ಲಿಂಕ್ ಇಲ್ಲ. ಇಷ್ಟೇನೊ ಅಥವಾ ಇನ್ನೇನಾದರೂ ಪ್ರಾಬ್ಲಂ ಇದೆಯೊ?

“ಸ್ಸಾರಿ ಡಾಕ್ಟರ್…ನಾನಿನ್ನೂ ಮುಖ್ಯ ವಿಚಾರಕ್ಕೇ ಬಂದಿಲ್ಲ. ಮೊನ್ನೆ ತಿಂಡಿತಟ್ಟೆ ಹಿಡಿದು ಇವರ ಕೋಣೆಗೆ ಹೋದಾಗ..ತಾವ್ಯಾರು? ಎಲ್ಲೊ ನೋಡಿದ ಹಾಗಿದ್ಯೆಲ್ಲಾ. ಜೀವನೋಪಾಯಕ್ಕೇನು ಮಾಡ್ಕೊಂಡಿದ್ದೀರಿ? ಎಂದು ಕೇಳಿದಾಗ ಜಂಘಾಬಲವೇ ಉಡುಗಿ ಹೋಗಿತ್ತು. ನನಗೆ. ನಂತರದ ದಿನಗಳಲ್ಲಿ ಸ್ನಾನ ಮಾಡಿ ಅರ್ಧ ಘಂಟೆ ಕಳೆದಿದ್ದರೂ ಮತ್ತೊಮ್ಮೆ ಸ್ನಾನ ಮಾಡಲು ಟವಲ್ಲು ಹಿಡಿದು ಬಚ್ಚಲು ಕೋಣೆಗೆ ಹೋಗುವ ಪರಿ ಪಾಠ ಆರಂಭವಾಯ್ತು. ಊಟದ ವಿಚಾರದಲ್ಲಿಯೂ ಹೀಗೆಯೆ ಪುನರಾವೃತ್ತಿಯಾಗ್ತಿದ್ದುದು ಗಾಬರಿಗೆ ಕಾರಣವಾಯ್ತು.

ಮ್ಯಾಟರ್ ಕೊಂಚ ಸೀರಿಯಸ್ಸಾಗೇ ಇರುವ ಹಾಗಿದೆಯಲ್ಲಮ್ಮ, ಇಷ್ಟೇನಾ…ಅಥವಾ…

“ಇನ್ನೂ ಇದೆ ಡಾಕ್ಟರ್. ಮುಂದಿನ ಪ್ರಸಂಗ ಕೇಳಿದ್ರೆ ನೀವು ಬೆಚ್ಚಿ ಬೀಳೋದಂತೂ ಗ್ಯಾರಂಟಿ. ಮೊನ್ನೆ ಬೆಳಗಿನ ಸಮಯ ದೇವರ ಪೂಜೆಗೆ ಹೂ ಕೊಯ್ಯಲು ನಾನು ಹಿತ್ತಲಿಗೆ ಹೋಗಿದ್ದೆ. ವಾಪಸ್ಸು ಬಂದು ನೋಡ್ತೀನಿ ಆಸಾಮಿಯೆ ನಾಪತ್ತೆ. ನಾನು ಮತ್ತು ನೆರೆಯ ಮಿತ್ರರು ಹುಡುಕದ ಜಾಗವಿಲ್ಲ. ಸುತ್ತದ ಬೀದಿಗಳಿಲ್ಲ.”

“ಇಂಥಹ ಟೈಮಿನಲ್ಲಿ ತಡಮಾಡದೆ ಪೊಲೀಸು ಕಂಪ್ಲೇಟು ಕೊಡ್ಬೇಕಮ್ಮ”

“ಯು ಆರ್ ರೈಟ್ ಡಾಕ್ಟರ್. ಆದ್ರೆ ಪೊಲೀಸು ಠಾಣೆಯಲ್ಲಿ ನನಗೆ ನಿರೀಕ್ಷಿಸದ ಆಭಾಸವಾಯ್ತು.

‘ಈಸ್ ಇಟ್?’

‘ನಿಮ್ಮೆಜಮಾನರ ಬಣ್ಣ ಮತ್ತು ಮೈ ಕಟ್ಟನ್ನು ವಿವರಿಸಿ ಎಂದು ಎ.ಎಸ್.ಐ. ಕೇಳಿದಾಗ ಕೊಂಚ ಮುಜುಗರವಾಯ್ತು. ಯಾರಾದ್ರೂ ಹೆಂಗಸರು ತಮ್ಮ ಗಂಡಂದಿರ ರಿಯಲ್ ಬಣ್ಣವನ್ನು ರಿವೀಲ್ ಮಾಡ್ಹೋಕ್ಕಾಗುತ್ಯೆ? ನನಗೂ ಈ ಸಂದಿಗ್ಧ ಎದುರಾಯ್ತು. ಅದಕ್ಕೆ ಸೂಕ್ಷ್ಮವಾಗಿ ಗೋಧಿಬಣ್ಣ – ಅಸಾಧಾರಣ ಮೈಕಟ್ಟು ಎಂದು ಸುಳ್ಳು ವಿವರಣೆ ಕೊಡಬೇಕಾಯ್ತು”

“ಆದರೆ ಇದರಿಂದ ಅವರನ್ನು ಪತ್ತೆ ಹಚ್ಚುವ ಕಾರ್ಯ ವಿಳಂಬವಾಗಿರ್ಬೇಕಲ್ಲಾ”?

“ನೊ ಡಾಕ್ಟರ್, ಮಿಸ್ಸಿಂಗ್ ಕಂಪ್ಲೇಂಟು ಕೊಟ್ಟ ಎರಡು ತಾಸಿನೊಳಗೇ ಇವರು ಟ್ರೇಸಾಗಿ ಮನೆಗೆ ಸೇಫಾಗಿ ತಲುಪಿದ್ರು”.

“ಎಲ್ಲಿಗೆ ಹೋಗಿದ್ರಂತೆ ಅವರು?”

“ಕಲಾಸಿಪಾಳ್ಯದ ಬಸ್‌ಸ್ಟ್ಯಾಂಡ್ ಸಮೀಪ ಪಾರ್ಕು ಮಾಡಿದ್ದ ಒಂದು ಲಕ್ಷುರಿ ವಾಲ್ವೊ ಬಸ್ಸಿನೊಳಗೆ ಒಂಟಿ ಕುಳಿತಿದ್ರಂತೆ”?

“ಎಲ್ಲೀಂದ್ರೀ? ಕಲಾಸಿ ಪಾಳ್ಯದಲ್ಲೇ? ಅಲ್ಲೆಲ್ಲೋ ಅವರ ಹಳೆಯ ಫ್ರೆಂಡು ಇದ್ದರಮ್ಮ. ಒಮ್ಮೆ ಅವರನ್ನು ನನ್ನ ಕ್ಲಿನಿಕ್ಕಿಗೆ ಕರೆದುಕೊಂಡು ಬಂದಿದ್ದರ ನೆನಪು. ಇಷ್ಟು ಸಾಕಮ್ಮ, ನಿನ್ನ ವಿವರಣೆ. ನಿಮ್ಮೆಜಮಾನರ ಖಾಯಿಲೇ ಡಯಾಗ್ನೈಸ್ ಆಯಿತು?”

“ಏನು ಖಾಯಿಲೆ ಡಾಕ್ಟರ್?”

“ಇದಕ್ಕೆ ಆಲ್ಜ಼ಮೀರ್! ಡಿಸೀಸ್ ಅನ್ತಾರೆ. ಈ ಖಾಯಿಲೆ ಗುಣಪಡಿಸೋಕ್ಕೆ

ಆಗದೆ ಇದ್ದರೂ ಉಲ್ಬಣವಾಗದ ಹಾಗೆ ಮಾಡಬಹುದು"

'ದಯವಿಟ್ಟು 'ರೆಮಿಡಿ' ಹೇಳಿ ಡಾಕ್ಟರ್. ನನ್ನ ಕೈ ಕಾಲು ನಡುಗುತ್ತಿದೆ, ವರಿ ಆಗ್ತಿದೆ.'

"ಸರಿಯಾಗಿ ಕೇಳಿಸ್ಕೋಮ್ಮ. ನಿಮ್ಮೆಜಮಾನರ ಕೋಣೆಯಲ್ಲಿಟ್ಟಿರುವ ಟಿ. ವಿ. ಯಲ್ಲಿ ಪ್ರಸಾರವಾಗುವ ಎಲ್ಲಾ ನ್ಯೂಸ್ ಛಾನಲ್ಲುಗಳನ್ನೂ ತೆಗೆಸಿ ಹಾಕಿ, ಬದಲಿಗೆ ಶಂಕರ ಮತ್ತು ಈಗ ಹೊಸದಾಗಿ ಬ್ರಾಡ್‌ಕಾಸ್ಟ್ ಆಗುತ್ತಿರುವ 'ನರೇಂದ್ರ' ಛಾನಲ್ಲುಗಳಿಗೆ ಮಾತ್ರ ಸಬ್‌ಸ್ಕ್ರೈಬ್ ಆಗಿ. ನಿಮ್ಮೆಜಮಾನರು ದಿನಕ್ಕೆ ಎಂಟು ಗಂಟೆಗಳ ಕಾಲ ಟಿ. ವಿ. ಯನ್ನು ಸತತವಾಗಿ ವೀಕ್ಷಿಸಲಿ. ಡೆಫೆನೆಟ್ಲಿ ಹಿ ವಿಲ್ ಕಮ್ ಔಟ್ ಆಫ್ ದಿಸ್ ಪ್ರಾಬ್ಲಂ"... ಡೋಂಟ್‌ವರಿ...

ಥ್ಯಾಂಕ್ಸ್ ಡಾಕ್ಟರ್. ಐ ಫೀಲ್ ರಿಲೀವ್ಡ್ ನೌ... ಹದಿನೈದು ದಿವಸಗಳ ನಂತರ ನಿಮಗೆ ಡೆವಲೆಪ್‌ಮೆಂಟ್ಸ್ ಬಗ್ಗೆ ಅಪ್‌ಡೇಟ್ ಮಾಡ್ತೇನೆ...

* * *

ಹಲೊ..ನಾನು ಡಾಕ್ಟರ್ ಮಾತನಾಡ್ತಿರೋದು..

ನಿನ್ನ ಧ್ವನಿ ಗೊತ್ತಾಯ್ತು. ಎನಿ ಇಂಪ್ರೂವ್‌ಮೆಂಟ್ಸ್, ಹದಿನೈದು ದಿವಸದೊಳಗೆ...?

"ನೊ ಡಾಕ್ಟರ್..ಮನೇಲಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿಕೊಂಡು ಬಿಟ್ಟಿದೆ. ನೀವು ಹೇಳಿದ ಹಾಗೇ ಮಾಡಿದೆ. ಆದರೆ ಪರಿಣಾಮ ಉಲ್ಟಾ ಹೊಡೆದು ಇವರನ್ನು ಕಂಟ್ರೋಲ್ ಮಾಡುಕ್ಕಾಗದೆ ನಮ್ಮಾವನವರು ತಲೆಯ ಮೇಲೆ ಟವಲ್ ಹಾಕ್ಕೊಂಡು ಮಾತಿಲ್ಲದೆ ಕತೆಯಿಲ್ಲದೆ ಕುಳಿತ್ಬಿಟ್ಟಿದ್ದಾರೆ.

'ವ್ಹಾಟ್ ಎ ಸರ್‌ಪ್ರೈಸ್? ಏನಾಯ್ತಮ್ಮ ಅಂಥದ್ದು?

'ನರೇಂದ್ರ' ಛಾನಲ್ಲು ನೋಡಿ ನೋಡಿ ಇವರು ನಿನ್ನೆ ದಿನ ನನ್ನನ್ನು ಹತ್ತಿರ ಕರೆದು, 'ನಮ್ಮ ಮಗು ಪುಟ್ಟ' ನನ್ನು ಇನ್ನುಮ್ಯಾಲೆ ಸ್ಕೂಲಿಗೆ ಕಳಿಸೋದು ಬ್ಯಾಡ. ಬದಲಿಗೆ ಅವನು ನಮ್ಮೂರಿನ ರೈಲ್ವೆ ಸ್ಟೇಷನ್ನಿನಲ್ಲಿ ನಿತ್ಯ ಟೀ ಮಾರಲಿ. ಮುಂದೊಂದು ದಿನ ಅವನು ದೇಶಕ್ಕೇ ದೊಡ್ಡ ಉಡುಗೊರೆಯಾಗ್ತಾನೆ ಅಂತ ಒಂದೇ ಸಮನೆ ಹಠ ಹಿಡಿದು ಕುಳಿತು ಬಿಟ್ಟಿದ್ದಾರೆ. 'ಪುಟ್ಟನ ಯೂನಿಫಾರಂ ಮತ್ತು ಶಾಲಾ ಪುಸ್ತಕಗಳನ್ನೆಲ್ಲಾ ಕಿಟಕಿಯಾಚೆ ಬಿಸಾಡಿದ್ದಾರೆ. ನನಗೆ ದಿಕ್ಕೇ ತೋಚುತ್ತಿಲ್ಲ. ಈಗ ನಾನ್ಮೇಡಲಿ?

'ದಯವಿಟ್ಟು ಅಳ್ಬೇಡೀಮ್ಮ. ಸಮಾಧಾನ ಮಾಡ್ಕೊಳ್ಳಿ. ನಿಮ್ಮ ಸಮಸ್ಯೆಗೆ ನನ್ನ ಹತ್ರ ಸೆಲ್ಯೂಷನ್ ಇಲ್ಲಾಮ್ಮ. ಇಂಥಹ ಕ್ಲಿಷ್ಟ ಸಂದರ್ಭದಲ್ಲಿ ಪರಿಹಾರ ನೀಡಲು ನಿಮ್ಮಾವ ದೇವೋಜಿರಾಯರೊಬ್ಬರೇ ಸಮರ್ಥರು. ನಾನೂ ಅವರ ಫಾಲೋಯರ್"

'ಅವರನ್ನು ಕೇಳಿದೆ ಡಾಕ್ಟರ್, ನಮ್ಮ 'ಪುಟ್ಟ' ಟೀ ಮಾರೋದಂತೂ ಬ್ಯಾಡ. ಟೀ ಟೋಟಲರ್ರಾಗಿ ಬೆಳೆದರೆ ಅಷ್ಟೆ ಸಾಕು. ಅದು ದೇಶಕ್ಕೆ ಇನ್ನೂ ದೊಡ್ಡ ಕೊಡುಗೆ' ಅಂದರು.

'ಗ್ರೇಟ್‌ಮ್ಯಾನ್ ...... ಗ್ರೇಟ್ ಅಡ್ವೈಸ್!"

■

# ರಾಶಿ ದರ್ಶನ

● ಸಂಪಟೂರು ವಿಶ್ವನಾಥ

ಸಾವಿರಾರು ಮಂದಿಯ ಮೈಮನಗಳಿಗೆ ಔಷಧ ಕೊಟ್ಟ ಡಾಕ್ಟ್ರು ನೀವು,
ನಾನು ಹೇಗೆ ಮರೆಯಲಿ ನಿಮ್ಮ, ಓ ಜ್ಞಾನ ರಾಶಿ?

ಮದ್ದಿನುಪಚಾರಕ್ಕಿಂತ ಮಾತಿನುಪಚಾರವ ಮಾಡಿ
ಮನಸ್ಸನ್ನು ತಿಳಿಗೊಳಿಸಿ ಕಳುಹಿಸಿದಿರಿ ತಾವು.
ನೋವ ಮರೆಸಿದ ನಿಮ್ಮ ಸಾಂತ್ವನದ ಸಿಹಿನುಡಿಯ
ಮರೆಯಲಾರದ ಅದೃಷ್ಟವಂತರಲಿ ನಾನೊಬ್ಬನಿರುವೆ.

'ನನ್ನ ಮಕ್ಕಳು ಆರಲ್ಲ, ಸಾವಿರದ ಆರು' ಎಂದು ಹೇಳಿ
ಗಳಿಸುದುದ ಹಂಚಿದಿರಿ, ಬಡತನವ ನೀಗಿದಿರಿ.
'ಮದ್ದು ಕೊಡುವುದಕಿಂತ ಮಾನವತೆ ಮುಖ್ಯ'
ಎಂದು ಅಪರಿಗ್ರಹವ ತೋರಿದಿರಿ ಗಾಂಧಿಯವರಂತೆ.

ಪಡೆದ ಪುರಸ್ಕಾರಗಳ ಪರರಿಗರ್ಪಿಸಿ ಬಿಟ್ಟು
ಸೌಜನ್ಯ ತೋರಿದಿರಿ, ಮೇಲ್ಪಂಕ್ತಿ ಹಾಕಿದಿರಿ.
'ನಾನಿಲ್ಲಿ ಕೇವಲ ನಿಮಿತ್ತ ಮಾತ್ರ' ಎಂದು ಉಚ್ಚರಿಸಿ
'ಕಾಣದ ಕೈ'ಯನ್ನು ವಂದಿಸಿದಿರಿ, ಆಧ್ಯಾತ್ಮಿಕತೆಯ ತೋರಿದಿರಿ.

ಕಾಲು ಶತಮಾನದ ಕಾಲ 'ಕೊರವಂಜಿ'ಯನು ಹೊರತಂದು
ಸೃಷ್ಟಿಸಿದಿರಿ ಸಾವಿರಾರುನಗೆ ಬರಹಗಾರರ ತಂಡವನು
ನಲವತ್ತು ಕೃತಿಗಳ ರಚಿಸಿ, ಮಾಡಿದಿರಿ ಸಾಹಿತ್ಯ ಪರಿಚಾರಿಕೆ
ಪರಿಷತ್ತು, ಅಕಾಡೆಮಿಗಳ ಕೈಹಿಡಿದು ನಡೆಸಿದಿರಿ.

ಕನ್ನಡ ನಾಡು ನುಡಿಯ ಋಣವ ತೀರಿಸಿಬಿಟ್ಟು,
ಚಿರಂಜೀವಿಯಾದಿರಿ ತಾವು, 1984ರಲ್ಲಿ
ಇಂದು, ನಾಳೆ, ನಾಳಿದ್ದು ನಮಗೆ ಮಾದರಿ ನೀವು,
ಇನ್ನೊಮ್ಮೆ ಸಿಗುವರೆ ಶಿವರಾಂ ಡಾಕ್ಟ್ರು?!

■

# ನನ್ನಾಕೆಯ ಸುತ್ತ

● ಕೆ. ರಮೇಶ

ಎಂಟನೇ ಮಾರ್ಚ್ ಅಂತರಾಷ್ಟ್ರೀಯ ಮಹಿಳಾ ದಿನದಂದು ಬೆಳಗ್ಗೆ ನನ್ನ ತೂಗು ಕುರ್ಚಿಯಲ್ಲಿ ಕಾಫಿ ಸವಿಯುತ್ತ ದಿನಪತ್ರಿಕೆಯಲ್ಲಿ ಕಣ್ಣಾಡಿಸುತ್ತಾ ಇದ್ದೆ. ಕಾಫಿಯಂತೂ ಮಯ್ಯಾ ಕಾಫಿಯನ್ನೂ ತುಸು ಹಿಂದೆ ಹಾಕಿದಂತಿತ್ತು. ಹಾಗೇ ಮಂಪರು ಬಂದು ವಿವಿಧ ಯೋಚನಾ ಲಹರಿಗಳು ಬಿಚ್ಚಿಟ್ಟವು. ನನ್ನವಳ ಬೆಳಗಿನ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗಿನ ದಿನಚರಿಯ ಮೆಲುಕು ಹಾಕಿದಾಗ ಗರಬಡಿದಂತಾಯ್ತು.

ಬೆಳಗ್ಗೆ ಎದ್ದ ಕೂಡಲೇ ಮೊದಲಿಗೆ ಸಮಯದ ನಿರ್ವಹಣೆ (ಟೈಂ ಮ್ಯಾನೇಜ್‌ಮೆಂಟ್) ಮಾಡಿ ದಿನದ ವೇಳಾಪಟ್ಟಿಯನ್ನೂ ಮನದಲ್ಲೇ ತಯಾರಿಸುತ್ತಾಳೆ. ನಂತರ ದಿನದ ಎಲ್ಲಾ ಕಾರ್ಯಗಳು ಪ್ರಾರಂಭ. ಸಮಯದ ನಿಷ್ಕೃಷ್ಟತೆಯೊಂದಿಗೆ ಪ್ರಾರಂಭವಾಗುತ್ತದೆ. ಬೆಳಗಿನ ಉಪಾಹಾರ ಸರಿಯಾಗಿ ಒಂಭತ್ತು ಗಂಟೆಗೆ ತಯಾರು. ಏನು ಮಾಡಬೇಕೆಂಬುದನ್ನು ಆಕೆ ಹಿಂದಿನ ದಿನವೇ ನಿರ್ಧರಿಸಿಯಾಗಿರುತ್ತದೆ. ನಂತರ 11 ಗಂಟೆಗೆ ಏನಾದರೂ ಫಲ ಹಾಗೂ ಪಾನೀಯ ಸೇವನೆ. ಮಧ್ಯಾಹ್ನ ಊಟಕ್ಕೆ 1–30 ಕ್ಕೆ ಸರಿಯಾಗಿ ತಯಾರು. ಗಡಿಯಾರ ನೋಡುವ ಅಗತ್ಯವೇ ಇಲ್ಲ. ಈ ರುಚಿಗಳ ಬಗ್ಗೆ ಆಕೆ ಯಾವ ತೂಕ, ಗಾತ್ರಗಳ ಪರಿಕರಗಳನ್ನೂ ಉಪಯೋಗಿಸದೆ ಹೇಗೆ ತಯಾರು ಮಾಡುತ್ತಾಳೆಂಬುದು ನಿಜಕ್ಕೂ ಯಕ್ಷಪ್ರಶ್ನೆ. ರುಚಿ, ಗುಣಮಟ್ಟದ ನಿರ್ವಹಣೆ (ಕ್ವಾಲಿಟಿ ಮ್ಯಾನೇಜ್‌ಮೆಂಟ್) ನಿಜಕ್ಕೂ ಶ್ಲಾಘನೀಯ. ಇನ್ನು ಸಂಜೆ ಟೀ ಜೊತೆಗೆ ಒಂದು ಚುರುಮುರಿ 4 ಗಂಟೆಗೆ ಪ್ರತ್ಯಕ್ಷ. ನಂತರ ಸಂಜೆ 7 ಗಂಟೆಗೆ ಗ್ರೀನ್ ಟೀ ಪೇಯ. ರಾತ್ರಿ 8.30 ಗಂಟೆಗೆ ಊಟದ ನಂತರ ದಿನದ ಕಾರ್ಯಕ್ರಮ ಮುಕ್ತಾಯ.

ಊಟದ ನಂತರ ಪಾತ್ರೆಗಳ ವಿಲೇವಾರಿ ಇದನ್ನು ಸ್ಥಳನಿರ್ವಹಣೆ (ಸ್ಪೇಸ್ ಮ್ಯಾನೇಜ್‌ಮೆಂಟ್) ಎಂದು ಕರೆಯೋಣವೇ? ಇದು ನಿಜಕ್ಕೂ ಬಹಳ ಕಿರಿಕಿರಿ ನೀಡುವ ಕೆಲಸ. ಆದರೂ ತಾಳ್ಮೆಯಿಂದ ನಿರ್ವಹಿಸುತ್ತಾಳೆ. ಅಡಿಗೆ ಮಾಡುವಾಗ ಎರಡೆರಡು ಬರ್ನರ್‌ಗಳನ್ನು ಉಪಯೋಗಿಸಲು ಸಮಯ–ನಿರ್ವಹಣೆ (ಟೈಂ ಮ್ಯಾನೇಜ್‌ಮೆಂಟ್) ಗೊತ್ತಿರಬೇಕು. ಪಾತ್ರೆಗಳನ್ನು ಸುಮ್ಮನೇ ಗುಡ್ಡಹಾಕದೆ ಇದ್ದ ಪಾತ್ರೆಗಳನ್ನೇ ಬಳಸಿ ಉಪಯೋಗಿಸುವ ದ್ರವ್ಯಸಾಧನ ನಿರ್ವಹಣೆಯಲ್ಲಿ (ರಿಸೋರ್ಸ್ ಮ್ಯಾನೇಜ್‌ಮೆಂಟ್) ಈಕೆ ಪರಿಣಿತಳು. ಅಲ್ಲದೆ ಆಗಾಗ ಬರುವ ಫೋನ್ ಕರೆಗಳು, ಕಾಲಿಂಗ್‌ಬೆಲ್, ಪೋಸ್ಟ್‌ಮೆನ್, ಕೊರಿಯರ್ ಮೆನ್, ಸೇಲ್ಸ್‌ಮೆನ್, ಇತ್ಯಾದಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಮಲ್ಟಿ ಟಾಸ್ಕ್ ಎಬಿಲಿಟಿ ಮ್ಯಾನೇಜ್‌ಮೆಂಟ್‌ನಲ್ಲಿ ಕೂಡ ಪರಿಣಿತಳು.

ಸಣ್ಣಪುಟ್ಟ ಅವಘಡಗಳಾದಾಗ ಅದೂ ಅಡಿಗೆ ಮನೆಯಲ್ಲಿ ಬಾತ್‌ರೂಮ್‌ಗಳಲ್ಲಿ ಗಾಭರಿಯಾಗದೆ, ಧೃತಿಗೆಡದೆ ನಿಭಾಯಿಸುವ ಸಮಯಪ್ರಜ್ಞೆ, ಸಾಮಾನ್ಯ ಜ್ಞಾನ ಸಾಕಷ್ಟಿದೆ. ಇದನ್ನೇ ಬಿಕ್ಕಟ್ಟು ನಿರ್ವಹಣೆ (ಕ್ರೈಸಿಸ್ ಮ್ಯಾನೇಜ್‌ಮೆಂಟ್) ಎಂದು ಕರೆಯುವುದು.

ಇನ್ನು ರಾತ್ರಿ ಊಟದ ವೇಳೆಗೆ ಅಕಸ್ಮಾತ್ ಮಾಡಿರುವ ಅಡಿಗೆ ಸ್ವಲ್ಪ ಕೊರತೆ ಉಂಟಾದರೆ ಅವುಗಳ ಎನ್‌ಲಾರ್ಜ್‌ಡ್ ಎಡಿಷನ್ ಅಥವಾ ರಿವೈಸ್ಡ್ ಎನ್‌ಲಾರ್ಜ್‌ಡ್ ಎಡಿಷನ್ ಮೂಲಕ ನ್ಯೂನತೆಗಳನ್ನು ಪರಿಹರಿಸಿ ಹೊಸರುಚಿ ಉಂಟುಮಾಡುತ್ತಾಳೆ. ಇದೂ ಬಿಕ್ಕಟ್ಟು ನಿರ್ವಹಣೆಯ ಇನ್ನೊಂದು ಮುಖ.

ಅಡಿಗೆ ಮನೆಯ ದಿನಿಸು, ತರಕಾರಿ ಇತರೇ ಸಾಮಗ್ರಿಗಳ ಶೇಖರಣೆ ಹಾಗೂ ತಪಶೀಲು ಪಟ್ಟಿ (ಇನ್ವೆಂಟರಿ) ಜವಾಬ್ದಾರಿ ಸುಲಭವಲ್ಲ. ಇದನ್ನು ಪದಾರ್ಥ ನಿರ್ವಹಣೆ ಎನ್ನುತ್ತಾರೆ. ಇದರಲ್ಲೂ ಈಕೆ ನಿಷ್ಣಾತೆ. ಈಕೆಗೆ ಜಪಾನಿನ ಜೆ.ಐ.ಟಿ. (JIT- ಜಸ್ಟ್ ಇನ್) ಮ್ಯಾನೇಜ್‌ಮೆಂಟ್‌ನಲ್ಲಿ ಭಾರಿ ನಂಬಿಕೆ. ಯಾವ ಸರಕನ್ನು ಮಣಗಟ್ಟಲೇ ಶೇಖರಿಸಿಡುವ ಖಯಾಲಿ ಇಲ್ಲ. ಬೇಕಾದಾಗ ಖರೀದಿಸು, ಬಳಸು ಎಂಬ ಜಪಾನಿನ ಪ್ರಖ್ಯಾತವಾದ ವ್ಯವಸ್ಥೆಯನ್ನು ಅಕ್ಷರಶಃ ಪಾಲಿಸುತ್ತಾಳೆ.

ಮನೆಯ ಎಲ್ಲ ಆರ್ಥಿಕ ವ್ಯವಹಾರಗಳು ಆರ್ಥಿಕ ನಿರ್ವಹಣೆ ಕೂಡ ನನ್ನಾಕೆಯ ಹೆಗಲಿಗೆ. ಇದನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾಳೆ. ತಿಂಗಳ ಆಯವ್ಯಯದ (ಬಜೆಟ್) ತಯಾರಿ ನಿರ್ವಹಣೆ ಎಲ್ಲಾ ಅವಳದೇ. ಇದುವರೆಗೂ ಕೊರತೆ ಬಜೆಟ್ ಆಗಿದ್ದು ನೆನಪಿಲ್ಲ. ಯಾವಾಗಲೂ ಉಳಿತಾಯದ ಬಜೆಟ್‌ನ್ನೇ ತಯಾರಿಸಿರುತ್ತಾಳೆ. ಇದು ಸಾಲದೆಂಬಂತೆ ತೋಟದ ನಿರ್ವಹಣೆ, ಮನೆಯ ಶುಚಿತ್ವ, ಕೆಲಸದವಳ, ತೋಟದವನ ಮೇಲ್ವಿಚಾರಣೆ, ಇವಿಷ್ಟು ಇವಳ ಹೆಗಲಿಗೆ ಏರಿದ ಜವಾಬ್ದಾರಿಗಳು. ಇದನ್ನೂ ಕಾರ್ಮಿಕ ನಿರ್ವಹಣೆ (ಲೇಬರ್ ಮ್ಯಾನೇಜ್‌ಮೆಂಟ್) ಎಂದು ಕರೆಯುತ್ತಾರೆ. ಮನೆಗೆ ಅಕಾಲಿಕ ಅತಿಥಿ / ಸ್ನೇಹಿತರ ದಂಡು ಆಗಮಿಸಿದಾಗ ಅಡಿಗೆಯ ಕ್ವಾಲಿಟಿ, ಕ್ವಾಂಟಿಟಿ ಗುಂಪು ನಿರ್ವಹಣೆಯನ್ನೂ (ಕ್ರೌಡ್‌ಟೈಂ ಮ್ಯಾನೇಜ್‌ಮೆಂಟ್ ಮ್ಯಾನೇಜ್‌ಮೆಂಟ್) ಅಚ್ಚುಕಟ್ಟಾಗಿ ನಿರ್ವಹಿಸುತ್ತಾಳೆ.

ಹಾಲು, ತರಕಾರಿ, ದಿನಸಿ ಇತರ ಪರಿಕರಗಳ ಖರೀದಿ ಹಾಗೂ ವ್ಯವಸ್ಥೆಗಳ (ಖರೀದಿ ಮ್ಯಾನೇಜ್‌ಮೆಂಟ್) ನಿರ್ವಹಣೆಯಲ್ಲಿ ಈಕೆ ಎತ್ತಿದ ಕೈ. ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾಳೆ.

ಇವೆಲ್ಲವುಗಳ ನಡುವೆ ಮನೆಮಂದಿಗಳಲ್ಲಿ ಮನಸ್ತಾಪ, ತಕರಾರು ಜಗಳ ಉದ್ಭವವಾದರೆ ಇವಳ ಮಧ್ಯಸ್ಥಿಕೆ ಅನಿವಾರ್ಯ. ಇವಳ ಜನರ ನಿರ್ವಹಣೆಯ ಚತುರತೆಗೆ ಎಲ್ಲರೂ ದಂಗಾಗುತ್ತಾರೆ. ಪರಿಸ್ಥಿತಿ ನಿಯಂತ್ರಣಕ್ಕೆ ಬಂದು ಸಾಮರಸ್ಯ ಮೂಡುತ್ತದೆ.

ಇವೆಲ್ಲವುಗಳ ನಡುವೆ ಪ್ರವಾಸಗಳ ಗಡಿಬಿಡಿ. ಪ್ರವಾಸ ನಿರ್ವಹಣೆಯಲ್ಲೂ ಈಕೆ ಎತ್ತಿದ ಕೈ. ಒಂದು ಕೈಪಿಡಿಯನ್ನೇ ತಯಾರಿಸಿ ಇಟ್ಟಿದ್ದಾಳೆ. ಅದರ ಪ್ರಕಾರ ಎಲ್ಲಾ ತಯಾರಿ ಮಾಡುತ್ತಾಳೆ.

ಮಗುವಾದ ಮೇಲಂತೂ ಅದರ ನಿರ್ವಹಣೆಯಲ್ಲಿ ತನ್ನ ಕೌಶಲವನ್ನು ತೋರಿಸಿದ್ದಾಳೆ.

ಇಷ್ಟೆಲ್ಲದರ ಮಧ್ಯೆ ಮನೆಯಾಕೆ ಹೊರಗೆ ಹೋಗಿ 8 ಗಂಟೆಗಳ ಕಾಲ ಕಾರ್ಯನಿರ್ವಹಿಸಿ ಮನೆಯನ್ನು ಸರಿದೂಗಿಸಿಕೊಂಡು ಹೋಗುವುದು ಸಾಮಾನ್ಯರಿಂದ ಸಾಧ್ಯವಿಲ್ಲ ಎಂದು ನನ್ನ ಅನಿಸಿಕೆ. ಹೀಗೆ ಮನೆಯೊಡತಿಯ ಕಾರ್ಯ ಅದೊಂದು

ಧ್ಯಾನ, ದಿನಚರಿ, ಕಲೆ, ವಿಜ್ಞಾನ, ಅನುಭೂತಿ, ಸೇವೆ, ಗೌರವ ಮೌಲ್ಯ ಎಲ್ಲವನ್ನೂ ಒಳಗೊಂಡಿದೆ.

ಇದು ನನ್ನೊಡತಿಗೆ ಮಾತ್ರವಲ್ಲ ವಿಶ್ವದ ಎಲ್ಲಾ ಮಹಿಳೆಯರಿಗೂ ಅನ್ವಯ. ಆಡಳಿತ ಸಂಸ್ಥೆಗಳಲ್ಲಿ ಕಲಿಸುವ ಆದರೆ, ಅದಕ್ಕೂ ಹೆಚ್ಚಿನ ಕೌಶಲ್ಯ, ಜಾಣತನ, ಜಾಣ್ಮೆ, ಕೈಚಳಕ ಮಹಿಳೆಯಲ್ಲಿದೆ. ಈ ಸಂಸ್ಥೆಗಳಿಗೆ ಮಹಿಳೆ ಸವಾಲಿನಂತಿದ್ದಾಳೆ. ಮೇಲೆ ಒಕ್ಕಣಿಸಿದ ಸುಮಾರು ಹದಿನೈದು ಕಲಾಕೌಶಲ್ಯಗಳನ್ನು (ಮ್ಯಾನೇಜ್‌ಮೆಂಟ್ ಟೆಕ್ನಿಕ್) ಲೀಲಾಜಾಲವಾಗಿ ಅಳವಡಿಸಿಕೊಳ್ಳುತ್ತಾಳೆ.

ಇವರೆಲ್ಲರಿಗೂ ನನ್ನ ಒಂದು ದೊಡ್ಡ ಸಲಾಂ. ನನ್ನ ದೃಷ್ಟಿಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನ ಪ್ರತಿನಿತ್ಯ ಆಚರಿಸಬೇಕಾದುದು. ಇದರ ಬಗ್ಗೆ ನೀವೇನಂತೀರಿ?

ದುಂಡಿರಾಜರ ಹನಿಗವನದೊಂದಿಗೆ ಈ ಲೇಖನ ಮುಕ್ತಾಯಗೊಳಿಸೋಣವೇ?

**ಪ್ರಿಯ ನಿನ್ನ**

**ಮುಖವೇಕೆ ಹೀಗೆ**


**ಕಪ್ಪಿಟ್ಟಿದೆ.**

**ಏನು ಮಾಡಲಿ ಪ್ರಿಯೆ**

**ಎದುರಿಗೆ ನೀ ಮಾಡಿದ**

**ಉಪ್ಪಿಟ್ಟಿದೆ!**

■



## ನೀತಿಯ ಕಥೆಗಳು– ಕಥಾ ಸ್ಪರ್ಧೆ

ಪೂಜ್ಯ ಜಿ.ಪಿ.ರಾಜರತ್ನಂ ಅವರಿಗೆ ಅರುವತ್ತು ತುಂಬಿದಾಗ ಅವರ ಆಪ್ತ ಮಿತ್ರರಾಗಿದ್ದ ರಾ.ಶಿ. ಅವರು ಆ ಸಂದರ್ಭಕ್ಕೋಸ್ಕರವೇ ಒಂದು ಪುಸ್ತಕವನ್ನು ಬರೆದು ತಮ್ಮ ಮಿತ್ರನಿಗೆ ಉಡುಗೊರೆಯಾಗಿ ನೀಡಿದರು. " ನೀತಿಯ ಕಥೆಗಳು– ಬಲಿತವರಿಗೆ " ಎಂಬ ಶೀರ್ಷಿಕೆಯಿದ್ದ ಆ ಪುಸ್ತಕದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಹೇಳುತ್ತಿದ್ದ ನೀತಿಯ ಕಥೆಗಳನ್ನು ಆಧುನಿಕ ಕಾಲದ ವಿದ್ಯಮಾನಗಳಿಗೆ ಒಗ್ಗುವಂತೆ ಬದಲಿಸಿ ಅದರಿಂದ ಸಟೈರ್ ಮಾದರಿಯ ಹಾಸ್ಯವನ್ನು ಸೃಷ್ಟಿಸುವ ಕಾರ್ಯ ನಡೆದಿತ್ತು. ಆ ಮಾದರಿಯ ಪ್ರಯತ್ನವನ್ನು ಈಗಿನ ಕಾಲಕ್ಕೆ ಹೊಂದಿಸಿದರೆ ಹೇಗೆ ಎಂಬ ಕುತೂಹಲದಿಂದ ನಮ್ಮ ಬರಹಗಾರರಿಗೆ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಆಹ್ವಾನ ನೀಡಿದೆವು.

ಮುಂದಿನ ಪುಟಗಳಲ್ಲಿ ಈ ನಿಟ್ಟಿನಲ್ಲಿ ಬರೆದಿರುವ ಹಲವಾರು ಲೇಖನಗಳನ್ನು ನೀವು ನೋಡಬಹುದು. ಈಸಾಪನ ದ್ರಾಕ್ಷಿ ಮತ್ತು ನರಿ, ಮೂರು ಮೀನುಗಳ ಕಥೆ, ಇರುವೆ ಮತ್ತು ಮಿಡತೆ ಮೀನು ಮತ್ತು ಕೊಕ್ಕರೆ ಇತ್ಯಾದಿ ಕಥೆಗಳೆಲ್ಲಾ ಇವೆಲ್ಲಾ ನಮ್ಮ ಬಾಲ್ಯದಲ್ಲಿ ನಾವು ಕೇಳಿರುವಂಥವೇ. ಇವಕ್ಕೆ ಆಧುನಿಕ ಮೆರಗನ್ನು ಲೇಪಿಸಿ ಹೊಸ ನಗೆ ಸಾಹಿತ್ಯವನ್ನು ಸೃಷ್ಟಿಸುವ ಯತ್ನ ಇಲ್ಲಿ ನಡೆದಿದೆ. ಓದುಗರಾದ ನೀವೇ ಈ ಸ್ಪರ್ಧೆಗೆ ತೀರ್ಪುಗಾರರು. ಖುಷಿಯಿಂದ ಓದಿ. ನಿಮ್ಮ ಪ್ರತಿಕ್ರಿಯೆಯನ್ನು ಅಗತ್ಯವಾಗಿ ತಿಳಿಸಿ.

**ಶಿವಕುಮಾರ್.**

## ಇರುವೆ ಮತ್ತು ಮಿಡತೆ

**ಶಿವು**

ಅದೊಂದು ತೋಟ. ಬೇಸಿಗೆ ಕಾಲ. ಇರುವೆಗಳು ಆಹಾರವನ್ನು ಗೂಡಿಗೆ ಸಾಗಿಸುತ್ತಾ ಸಾಲುಗಟ್ಟಿ ಹೊರಟಿದ್ದವು. ಹತ್ತಿರ ದಲ್ಲಿದ್ದ ದಾಸವಾಳದ ಹೂವಿನ ಮೇಲೆ ಮಿಡತೆಯೊಂದು ನಿಂತು "ನಾನೇ ರಾಜಕುಮಾರ" ಅಂತ ತನಗೆ ತಾನೇ ಹಾಡಿ ಕೊಳ್ಳುತ್ತಿತ್ತು. ಗಿಡದ ಬುಡದಲ್ಲಿ ತಾನು ಹೊತ್ತ ಭಾರಾನ ಹೊರಲಾರದೇ ಹೊತ್ತು ಹೋಗುತ್ತಿದ್ದ ಇರುವೆಗೆ ಇದನ್ನ ಕಂಡು ರೇಗಿತು. " ಮಿಡತೇಣ್ಣ, ಮಿಡತೇಣ್ಣ, ಹೀಗೆ ನೀನು ದಿನವೆಲ್ಲಾ ಹೂವಿನ ಮೇಲೆ ನಿಂತು ಹಾಡ್ತಾ ಕಾಲ ಕಳೀತಿದ್ರೆ, ಛಳಿಗಾಲ ಬಂದಾಗ ಆಹಾರಕ್ಕೇನು ಮಾಡ್ತೀಯಾ ? ನಮ್ಮಗಳ ತರ ನೀನೂ ಕೂಡ ನಿನ್ನ ಆಹಾರಾನಾ ಶೇಖರಿಸಿಕೊಳ್ಳಬಾರದೇ? " ಅಂತ ಕೇಳಿತು. ಮಿಡತೇಗೆ ಇರುವೆ ಮಾತು ಸ್ವಲ್ಪಾನೂ ಇಷ್ಟ ಆಗಲಿಲ್ಲ. " ಹೇ ಇರುವೇ ನಿನಗ್ಯಾಕೆ ಇಲ್ಲದ ಉಸಾಬರಿ.

ಹುಟ್ಟಿಸಿದ ದೇವರು ಹುಲ್ಲು ಮೇಯಿಸ್ತಾನೆ ಅಂತ ಗಾದೇನೇ ಇದೆಯಲ್ಲಾ. ನನ್ನ ಅಹಾರದ ಬಗ್ಗೆ ನೀನು ತಲೆ ಬಿಸಿ ಮಾಡಿಕೋ ಬೇಡ." ಅಂತ ಹೇಳಿ ಇನ್ನೊಂದು ಹೂವಿನತ್ತ ಕುಪ್ಪಳಿಸಿತು. ಛಳಿಗಾಲ ಬಂದೇ ಬಂತು. ಇರುವೆಗಳೆಲ್ಲಾ ಬೆಚ್ಚಗೆ ತಮ್ಮ ಗೂಡಿನಲ್ಲಿ ಕೂತು, ಮಸಾಲೆದೋಸೆ, ಸ್ಟ್ರಾಂಗ್ ಕಾಫಿ ಕುಡಿಯುತ್ತಾ ಇದ್ದಾಗ, ಪಾಪ ಮಿಡತೆ ಛಳಿಯಲ್ಲಿ ನಡುಗುತ್ತಾ ಬಂಡೇ ಮೇಲೆ ಕೂತಿತ್ತಂತೆ. ಅದಕ್ಕೇ " ಯಾವಾಗಲು ಕಷ್ಟ ಪಟ್ಟು ದುಡೀತಾನೇ ಇರಬೇಕು. ಕೈ ಕೆಸರಾದರೆ ಬಾಯಿ ಮೊಸರು " ಅಂತೆಲ್ಲಾ ನಮ್ಮ ಹಿರಿಯರು ಹೇಳ್ತಾ ಇದ್ದದ್ದು.

ಕಾಲ ಬದಲಾಯಿತು. ರಾಜೀವ ಸಂಜೀವ ಅಣ್ಣತಮ್ಮಂದಿರು. ರಾಜೀವ ಆದರ್ಶ ವಿದ್ಯಾರ್ಥಿ. ಯಾವಾಗಲೂ ಕ್ಲಾಸಿಗೆ ಮೊದಲು. ಎಲ್ಲ ಪರೀಕ್ಷೆಗಳಲ್ಲೂ ರ‍್ಯಾಂಕ್ ತಗೊಂಡು ಸಾಫ್ಟ್ ವೇರ್ ಇಂಜಿನಿಯರ್ ಆಗಿ, ಗೇಟೆಡ್ ಕಮ್ಯೂನಿಟಿಲಿ ಮನೆ ತಗೊಂಡು ಬೆಳಗಿನಿಂದ ಸಂಜೆ ವರೆಗೂ ವರ್ಕ್ ಫ್ರಂಮ್ ಹೋಮ್ ಮಾಡ್ತಾ ಇದ್ದ.

ಅವನ ತಮ್ಮ ಸಂಜೀವ ಇದಕ್ಕೆ ತದ್ವಿರುದ್ಧ. ಪಿಯೂಸೀನಲ್ಲೇ ಢುಮ್ಕಿ ಹೊಡೆದು, ಸಿನಿಮಾ ನಟ ಆಗ್ತೀನಿ ಅಂತ ಇದ್ದ ಬದ್ದ ಆಸ್ತೀನೆಲ್ಲಾ ಹಾಳುಮಾಡಿ, ಗೂಳೀತರ ಊರೆಲ್ಲೆಲ್ಲಾ ಓಡಾಡ್ಕೊಂಡು ಇದ್ದ. ಅಣ್ಣ ರಾಜೀವ ತಮ್ಮನಿಗೆ ಎಷ್ಟೇ ಬುದ್ಧಿವಾದ ಹೇಳಿದ್ರೂ ಅವ ಕೇಳಬೇಕಲ್ಲಾ. ತನ್ನದೇ ದಾರಿ. ಆಗಾಗ ತಮ್ಮ ಸಂಜೀವ ಅಣ್ಣನ ಬಳಿ ಬಂದು ಸಾಲ ಕೇಳೋದು, ಅಣ್ಣ ಛೀಮಾರಿ ಹಾಕಿ ಅಷ್ಟೋ ಇಷ್ಟೋ ಕೊಡೋದು ನಡೆದೇ ಇತ್ತು.

ಪರಿಸ್ಥಿತಿ ಹೀಗಿದ್ದಾಗ ಒಮ್ಮೆ ಅಣ್ಣ ರಾಜೀವನ್ನ ನೋಡುಕ್ಕೆ ಅಂತ ಸಂಜೀವ ಬಂದ. ಸರಿ ಏನೋ ಸಾಲ ಕೇಳುಕ್ಕೆ ಬಂದಿದಾನೆ ಅಂದ್ಕೊಂಡು ರಾಜೀವ , " ಏನು ಬಂದೆ ?" ಅಂತ ತಮ್ಮನ್ನ ಕೇಳ್ದ. ಸಂಜೀವ ನಿಧಾನವಾಗಿ ತನ್ನ ಜೇಬಿನಿಂದ ಒಂದು ಪುಸ್ತಕದಷ್ಟು ಧಡೂತಿಯಾಗಿದ್ದ ಆಮಂತ್ರಣ ಪತ್ರವೊಂದನ್ನು ಅಣ್ಣನ ಕೈಗಿಟ್ಟು, "ಮುಂದಿನ ವಾರ ಗೃಹಪ್ರವೇಶ. ಕರೆಯುಕ್ಕೆ ಬಂದಿದೀನಿ." ಅಂತ ಹೇಳಿದ.

ರಾಜೀವನಿಗೆ ಮಾತೇ ಹೊರಡಲಿಲ್ಲ. ಏನು ಯಾಕೆ ಅಂತ ಕೇಳೋ ಅಷ್ಟರಲ್ಲಿ ತಮ್ಮನೇ ಶುರು ಮಾಡ್ದ. "ಹೋದ ತಿಂಗಳು ಮುಂಬೈಗೆ ಹೋಗಿದ್ದಾಗ ಕೌನ್ ಬನೇಗ ಕ್ರೋರ್ ಪತಿ ಸ್ಪರ್ಧೆಲಿ ಭಾಗವಹಿಸಿದ್ದೆ. ಹತ್ತು ಕೋಟಿ ಬಹುಮಾನ ಬಂತು. ಅಷ್ಟು ಹಣಾನೂ ವನಜಳ ಕೈಲಿಟ್ಟು ಕೈ ತೊಳೆದುಕೊಂಡುಬಿಟ್ಟೆ. ಅವಳು ಬಹು ಜಾಣೆ. ಎಲ್ಲ ಸರಿಯಾದ ಕಡೆ ಇನ್ವೆಸ್ಟ್ ಮಾಡಿ ಒಂದು ಫ್ಲಾಟ್‌ನೂ ಖರೀದಿಸಿ ಬಿಟ್ಟಳು. ಗೃಹಪ್ರವೇಶವಾದಮೇಲೆ ಮಾಲ್ಡೀವ್ಸ್ ಗೆ ಹಾಲಿಡೇ ಹೋಗ್ತಾ ಇದೀವಿ. ನೀನೂ ಬರ್ತೀಯೇನು?" ಅಂತ ಕೇಳಿದ ಸಂಜೀವ.

" ಈ ತಿಂಗಳ ಕೊನೇಗೆ ಪ್ರಾಜೆಕ್ಟ್ ಡೆಡ್ಲೈನ್ ಇದೆಯಲ್ಲೋ, ನಾನು ಹೇಗೆ ಬರುಕ್ಕಾಗುತ್ತೆ ?" ಅಂತ ಹಲುಬಿದ ರಾಜೀವ.

ಅದಕ್ಕೆ ಈಗಿನ ಹಿರಿಯರು ಹೇಳೋದು, ಅಂಗೈ ನೆಲ್ಲೀಕಾಯಿಗಿಂತ ಅಂಗೈ ರೇಖೆ ಮುಖ್ಯ ಅಂತ.

■

# ಅಜ್ಜನಿಗೆ ಸಾಧ್ಯವಾಗದೇ ಹೋದದ್ದು

**● ಬೇಲೂರು ರಾಮಮೂರ್ತಿ**

ಒಂದು ಊರು, ಆಗಿನ್ನೂ ಊರು ಎನಿಸಿಕೊಂಡಿರಲಿಲ್ಲ. ಸುತ್ತಮುತ್ತ ಇದ್ದ ಹತ್ತಾರು ಮನೆಗಳನ್ನೇ ಊರು ಎಂದು ಕರೆದಿದ್ದರು. ಆಗ ಪ್ರಥಮ ಚುನಾವಣೆ ಸಂದರ್ಭ. ಪುರಸಭೆ, ಪಂಚಾಯಿತಿ, ವಿಧಾನಸಭೆ ಹೀಗೆಲ್ಲಾ ಏನಿರಲಿಲ್ಲ. ಪ್ರಜಾಪ್ರತಿನಿಧಿ ಸಭೆ ಎನ್ನುವುದೊಂದು. ಅದಕ್ಕೆ ಜನರಿಂದಲೇ ಆರಿಸಿ ಬರಬೇಕು. ಬಂದವರ ಕೈಗೆ ಅಧಿಕಾರ. ಸರಿ ಪುಟ್ಟಸ್ವಾಮಯ್ಯನವರೂ ಕೂಡಾ ಚುನಾವಣೆಗೆ ನಿಂತರು. ಆಗೆಲ್ಲಾ ಹೀಗೆ ಪೈಪೋಟಿ, ಹಣ, ಕೊಲೆ, ಸುಲಿಗೆ, ದರ್ಪ ಇವುಗಳು ಇರಲಿಲ್ಲ. ಆದರೂ ಸಜ್ಜನರು ಎನಿಸಿಕೊಂಡ ಪುಟ್ಟಸ್ವಾಮಯ್ಯನವರು ಚುನಾವಣೆಯಲ್ಲಿ ಸೋತರು. ಅದರಿಂದ ಅವರಿಗೆ ಬೇಜಾರೇನೂ ಆಗಲಿಲ್ಲ. ಆದರೆ ಅವರ ಹಿತೈಷಿಗಳು, ನೆಂಟರು, ಸ್ನೇಹಿತರು ಎನಿಸಿಕೊಂಡವರು ಸೋತ ಪುರುಕ ಸೋರೇಕಾಯಿ ಹಿತ್ತಲಿಗೊಂದು ಹೀರೇಕಾಯಿ ಅಂತ ಆಡಿಕೊಂಡು ಅವರ ಮನ ನೋಯಿಸಿದರು. ಅದೇ ಮೊದಲು ಅದೇ ಕೊನೆ, ಪುಟ್ಟಸ್ವಾಮಯ್ಯನವರು ಮತ್ತೆ ಚುನಾವಣೆ ಅಂತ ಮುಖ ಮಾಡಲಿಲ್ಲ. ಹೇಗೋ ಜೀವನ ಸಾಗಿಸಿ ಒಂದು ದಿನ ಕಣ್ಣು ಮುಚ್ಚಿದರು.

ಈಗ ಅವರ ಮೂರನೇ ತಲೆಮಾರು ಅಂದರೆ ಪುಟ್ಟಸ್ವಾಮಯ್ಯನವರ ಮೊಮ್ಮಗ ಅಂದರೆ ಮಗ ನಾಗಚಂದ್ರಸ್ವಾಮಿಯ ಮಗ ಪುಟ್ಟನರಸಿಂಹಸ್ವಾಮಿ ಚುನಾವಣೆಗೆ ನಿಲ್ಲೋಣ ಅಂತ ನಿರ್ಧರಿಸಿದ್ದಾನೆ. ಈಗ ತಾತನೂ ಇಲ್ಲ ಅಪ್ಪನೂ ಇಲ್ಲ. ಮೊಮ್ಮಗ ಪುಟ್ಟನರಸಿಂಹಸ್ವಾಮಿ ಊರಿನಲ್ಲಿ ಸಾಕಷ್ಟು ಜನಪ್ರಿಯ. ಅವನು ತಾತನಂತೆ ಪ್ರಜಾಪ್ರತಿನಿಧಿ ಸಭೆಗೆ ನಿಲ್ಲಲಿಲ್ಲ. ವಿಧಾನಸಭೆಗೇ ನಿಂತ. ಜನ ಎಲ್ಲ ತಮಾಷೆ ಮಾಡಿದರು. ತಾತನ ಕೈಲಿ ಆಗದ್ದು ಮೊಮ್ಮಗ ಇನ್ನೇನು ಕಿಸೀತಾನೆ ಅಂತ. ಆದರೆ ಪುಟ್ಟನರಸಿಂಹಸ್ವಾಮಿ ಹೇಗಾದರೂ ಮಾಡಿ ನಾನು ವಿಧಾನಸಭೆಗೆ ಪ್ರವೇಶ ಮಾಡಲೇಬೇಕು ಅಂತ ನಿರ್ಧರಿಸಿದ್ದ. ಅದಕ್ಕೆ ಅವನು ಮಾಡಿದ ಉಪಾಯ ಎಂದರೆ ಒಂದು ಕಡೆ ತಾನು, ಮತ್ತೊಂದು ಕಡೆ ಹೆಂಡತಿ, ಇನ್ನೊಂದು ಕಡೆ ಮಗ ಹೀಗೆ ಮೂರೂ ಜನರು ಚುನಾವಣೆಗೆ ನಿಂತರು. ಒಂದು ವೇಳೆ ಪುಟ್ಟನರಸಿಂಹಸ್ವಾಮಿ ಚುನಾವಣೆಲಿ ಸೋತರೆ ಹೆಂಡತಿ ಅಥವಾ ಮಗ ಇಬ್ಬರಲ್ಲೊಬ್ಬರು ಗೆದ್ದಿದ್ದರೂ ಅವರು ಮರುಚುನಾವಣೆ ಆಗುವಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಅಂತ ಒಪ್ಪಂದ ಆಗಿತ್ತು. ಈ ಎಲ್ಲಾ ಮಸಲತ್ತುಗಳನ್ನು ನೋಡಿ ಜನ ನಕ್ಕರು. ಕೆಲವರು ಪುಟ್ಟನರಸಿಂಹಸ್ವಾಮಿಯ ಬಳಿ ಬಂದು ಇರೋ ದುಡ್ಡು ಯಾಕೆ ಹಾಳು ಮಾಡ್ಕೊತೀಯ. ನಿನ್ನ ವಂಶಕ್ಕೆ ರಾಜಕೀಯ ಆಗಿಬರೋಲ್ಲ ಅಂದು ಅಣಕಿಸಿದರು. ಆದರೆ ಪುಟ್ಟನರಸಿಂಹಸ್ವಾಮಿ ತನ್ನ ತಾತನಂತಲ್ಲ. ಅಂದುಕೊಂಡಿದ್ದು ಸಾಧಿಸಲೇಬೇಕು ಅಂತ ನಿರ್ಧರಿಸಿದ್ದ. ಪಾಪ ಏನು ತಿಳಿಯದ ಹಂಡತಿ ರೀ ನನಗೇನು ಗೊತ್ತಾಗುತ್ತೆ ಇದು ನನಗೆ ಬೇಡ ಎಂದಳು. ಅದಕ್ಕೆ ಪುಟ್ಟನರಸಿಂಹಸ್ವಾಮಿ ನೀನು ಒಂದು ಸಾರಿ ಗೆಲ್ಲು, ನಂತರ ನಿನ್ನ ಬೆನ್ನ ಹಿಂದೆ ನಿಂತು ಅಧಿಕಾರ ನಡೆಸೋನು ನಾನು. ನೀನು ನಾನು ಹೇಳಿದ ಕಡೆ ಸಹಿ ಹಾಕುತ್ತಾ ಇರು. ನಾನು ದುಡ್ಡು ತುಂಬಿಸಿಕೊಳ್ತಿರ್ತೀನಿ ಅಂದ.

ಸರಿ ಚುನಾವಣೆ ಬಂತು. ಅದಕ್ಕೆ ಎಲ್ಲ ತಯಾರಿಯನ್ನೂ ಮಾಡಿದ್ದರು. ಏನಯ್ಯಾ ಮನೆಗೆ ಮೂರು ಮೂರು ಜನ ಚುನಾವಣೆಗೆ ನಿಂತಿದ್ದಾರೆ. ಇವರಿಗೇನು ಬುದ್ಧಿ ಇದೆಯಾ ಅಂತ ಜನ ಆಡಿಕೊಂಡರು. ತಾತನಂತೆಯೇ ಮೊಮ್ಮಗನೂ ಅವನ ಹೆಂಡತಿ ಮಗನೂ ಮಣ್ಣು ಮುಕ್ಕುತ್ತಾರೆ ಅಂತ ಲೆಕ್ಕಾಚಾರ ಹಾಕಿದ್ದರು. ಚುನಾವಣೆ ಫಲಿತಾಂಶ ಬಂದಿತು. ಅದು ಬರೀ ಪುಟ್ಟನರಸಿಂಹಸ್ವಾಮಿಯೊಬ್ಬನನ್ನೇ ಅಲ್ಲ ಇಡೀ ರಾಜಕೀಯ ಪಂಡಿತರನ್ನೇ ಅಚ್ಚರಿಗೊಳಿಸಿತು. ಏಕೆಂದರೆ ಪುಟ್ಟನರಸಿಂಹಸ್ವಾಮಿ, ಅವನ ಹೆಂಡತಿ ಮಗ ಮೂರು ಜನರೂ ಚುನಾವಣೇಲಿ ಗೆದ್ದಿದ್ದರು.

ಈಗ ಪುಟ್ಟನರಸಿಂಹಸ್ವಾಮಿ ರಾಜ್ಯದ ಆಹಾರ ಮಂತ್ರಿ, ಅವನ ಹೆಂಡತಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ ಮಗ ನನಗೆ ಈಗಲೇ ಏನೂ ಬೇಡ ಎಂದಿದ್ದರಿಂದ ಅವನು ಬರೀ ಶಾಸಕನಾಗಿದ್ದಾನೆ. ಆದರೂ ಪುಟ್ಟನರಸಿಂಹಸ್ವಾಮಿಯ ಬಲವಂತದಿಂದ ಅವನಿಗೆ ಪಕ್ಷದ ರಾಜ್ಯಾಧ್ಯಕ್ಷನನ್ನಾಗಿ ಮಾಡಿದ್ದಾರೆ. ಈಗ ಅವರ ಮನೆಯಲ್ಲಿ ಮೂರು ಮೂರು ಕಾರುಗಳು, ಆಳುಕಾಳುಗಳು.

ಕಡೆಗೂ ತಾತನಿಗೆ ಆಗದ್ದನ್ನು ಮೊಮ್ಮಗ ಸಾಧಿಸಿದ ಎನ್ನುವ ಹೆಮ್ಮೆ ಪುಟ್ಟನರಸಿಂಹಸ್ವಾಮಿಯದು. ಮೇಲಿಂದಲೇ ಪುಟ್ಟಸ್ವಾಮಯ್ಯನವರು ಮೊಮ್ಮಗನನ್ನು ಹರಸುತ್ತಿದ್ದಾರೆ.

ನೀತಿ: ಅಜ್ಜನಿಗೆ ಆಗಲಿಲ್ಲ ಎಂದು ಮೊಮ್ಮಗ ಸುಮ್ಮನೇ ಕೂರಬಾರದು. ಅಜ್ಜನ ಲೆಕ್ಕವೇ ಬೇರೆ ಮೊಮ್ಮಗನ ಲೆಕ್ಕವೇ ಬೇರೆ

■

---




## ಅಭಿನಂದನೆಗಳು

ಅಪರಂಜಿಯ ಬರಹಗಾರ ಬಳಗದ
ಶ್ರೀಯುತ ಇ.ಆರ್ ರಾಮಚಂದ್ರನ್ ಅವರ ಹೊಸ ಪುಸ್ತಕ **'ಒನ್ಸ್ ಅಪಾನ್ ಎ ಟೈಮ್ ಬ್ಯಾಂಗಲೂರ್ – ಅಜ್ಜಿ ಎಂಡ್ ಅದರ್ ಟೇಲ್ಸ್'**, ಮೈಸೂರಿನಲ್ಲಿ ಡಿಸೆಂಬರ್ ಇಪ್ಪತ್ತೈದರಂದು ಬಿಡುಗಡೆಯಾಯಿತು.
**ಶ್ರೀಯುತರಿಗೆ ಅಪರಂಜಿಯ ಹಾರ್ದಿಕ ಅಭಿನಂದನೆಗಳು.**

# ನರಿ ಮತ್ತು ಹುಳಿ ದ್ರಾಕ್ಷಿ ಕತೆ

**● ಆನಂದ**

'ದ್ರಾಕ್ಷಿ ಹುಳಿ' ಎಂದು ಹೇಳಿ ತಾನು ದ್ರಾಕ್ಷಿ ತೋಟದಿಂದ ವಾಪಸ್ ಬಂದ ಸುದ್ದಿಯನ್ನು ನರಿ ಇಂದು ಬಲವಾಗಿ ಅಲ್ಲಗಳೆಯಿತು.

ಕಿಕ್ಕಿರಿದ ಮಾಧ್ಯಮ ಗೋಷ್ಠಿಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದ ನರಿ 'ತನ್ನ ಚಾರಿತ್ರ್ಯ ವಧೆ ಮಾಡಲು ಪಟ್ಟಭದ್ರಹಿತಾಸಕ್ತಿಗಳು ಕಟ್ಟಿದ ಕತೆ ಅದು' ಎಂದು ಹೇಳಿತು.

ತಾನು ದ್ರಾಕ್ಷಿ ತೋಟಕ್ಕೆ ಭೇಟಿ ನೀಡಿದ್ದನ್ನು ನರಿ ಅಲ್ಲಗಳೆಯದಿದ್ದರೂ ಅಲ್ಲಿದ್ದ ಯಾವುದೇ ದ್ರಾಕ್ಷಿ ಗೊಂಚಲಿನ ಮೇಲೆ ತಾನು ಕಣ್ಣು ಹಾಕಿದ್ದೆ ಎಂಬುದನ್ನೂ ಅದು ಬಲವಾಗಿ ನಿರಾಕರಿಸಿತು. ಆದುದರಿಂದ ತಾನು ದ್ರಾಕ್ಷಿ ಗೊಂಚಲನ್ನು ಕೀಳಲು ಪ್ರಯತ್ನಿಸಿದೆ ಎಂಬ ಆಪಾದನೆಗೆ ಆಧಾರವೇ ಇಲ್ಲ ಎಂದ ನರಿ 'ಅದು ಕೇವಲ ಅಪಪ್ರಚಾರ. ನನ್ನ ವಿರುದ್ಧ ನಡೆದಿರುವ ಸಂಚು' ಎಂದು ಹೇಳಿತು.

'ತಮ್ಮ ವಿರುದ್ಧ ಸಂಚು ಅಥವಾ ಅಪಪ್ರಚಾರ ನಡೆಸಲು ಯಾರಾದರೂ ಯಾಕಾದರೂ ಬಯಸುತ್ತಾರೆ?' ಎಂಬ ವರದಿಗಾರರೊಬ್ಬರ ಪ್ರಶ್ನೆಗೆ 'ಸಮಯ ಬಂದಾಗ ಎಲ್ಲವನ್ನೂ ಬಹಿರಂಗಗೊಳಿಸುತ್ತೇನೆ' ಎಂದಷ್ಟೇ ಉತ್ತರಿಸಿತು. ಕಾಡಿನ ವ್ಯವಸ್ಥೆಯನ್ನು ಅಭದ್ರಗೊಳಿಸಲು ಹಲವಾರು ಪ್ರಯತ್ನಗಳು ನಡೆಯುತ್ತಿದ್ದು ಇದೂ ಅದರಲ್ಲಿ ಸೇರಿರಬಹುದು ಎಂದು ಅದು ಅಭಿಪ್ರಾಯಪಟ್ಟಿತು.

'ತಾವು ಕಾಡಿನಲ್ಲಿರುವುದನ್ನು ಬಿಟ್ಟು ಊರಿನಲ್ಲಿರುವ ದ್ರಾಕ್ಷಿ ತೋಟಕ್ಕೆ ಹೋಗಿದ್ದಾದರೂ ಏಕೆ? ಎಂಬ ಪ್ರಶ್ನೆಗೆ ನರಿಯಿಂದ ಸಮರ್ಪಕ ಉತ್ತರ ಬರಲಿಲ್ಲ. ಆದರೆ 'ತಾವು ದ್ರಾಕ್ಷಿ ತೋಟಕ್ಕೆ ನುಗ್ಗಿದ್ದೇ ಜನರಲ್ಲಿ ಸಂಶಯದ ಬೀಜ ಬಿತ್ತುವುದಿಲ್ಲವೆ?' ಎಂದು ವರದಿಗಾರರೊಬ್ಬರು ಕೇಳಿದಾಗ 'ನುಗ್ಗಿದ್ದು' ಎಂಬ ಪದ ಬಳಸಿದ್ದಕ್ಕೆ ಅದು ತೀವ್ರವಾದ ಆಕ್ಷೇಪ ಎತ್ತಿತು.

'ನಾನು ನುಗ್ಗಿದ್ದೆ ಎಂದು ನೀವು ಹೇಗೆ ಹೇಳುತ್ತೀರಿ? ದ್ರಾಕ್ಷಿ ತೋಟದ ಮಾಲೀಕರು ಅತಿಕ್ರಮ ಪ್ರವೇಶದ ಬಗ್ಗೆ ಪೊಲೀಸರಿಗೆ ದೂರು ನೀಡುವುದಿರಲಿ ಹೇಳಿಕೆಯನ್ನಾದರೂ ಇತ್ತಿದ್ದಾರೆಯೆ?' ಎಂದು ಏರಿದ ದನಿಯಲ್ಲಿ ನರಿ ಕೇಳಿದಾಗ ವರದಿಗಾರರು ತಮ್ಮ ಪ್ರಶ್ನೆಯನ್ನು ಹಿಂದಕ್ಕೆ ಪಡೆದರು. ಬದಲಿಗೆ 'ತಾವು ದ್ರಾಕ್ಷಿ ತೋಟಕ್ಕೆ ಹೋಗಿದ್ದೇ ಜನರಲ್ಲಿ ಸಂಶಯ ಉಂಟುಮಾಡದೆ?' ಎಂದು ಕೇಳಿದಾಗ ನರಿಯು 'ಹಾಗೇನಿಲ್ಲ. ಪತ್ರಿಕೆಗಳು ಸಣ್ಣ ಘಟನೆಯನ್ನು ತಿರುಚಿ ಬರೆದಿವೆ' ಎಂದಿತು.

'ಹಾಗಾದರೆ ಆ ಸಣ್ಣ ಘಟನೆ ಯಾವುದು?'

'ಅದೇ ನಾನು ತೋಟಕ್ಕೆ ಭೇಟಿ ನೀಡಿದ್ದು. ಅದನ್ನು ನಾನು ನಿರಾಕರಿಸಿಲ್ಲವಲ್ಲ.'

'ಹಾಗಿದ್ದರೆ ತಾವು ದ್ರಾಕ್ಷಿ ತೋಟಕ್ಕೆ ಭೇಟಿ ನೀಟಿದ ಉದ್ದೇಶವಾದರೂ ಏನು?' ಎಂದು ವರದಿಗಾರರೊಬ್ಬರು ಕೇಳಿದರು. 'ನನ್ನ ಎಲ್ಲ ಉದ್ದೇಶಗಳನ್ನು ನಾನು ಬಹಿರಂಗವಾಗಿ ಚರ್ಚಿಸಬೇಕಿಲ್ಲ. ಚರ್ಚಿಸುವುದೂ ಇಲ್ಲ' ಎಂದು ನರಿ ಉತ್ತರಿಸಿತು.

ಆದರೆ ಅಷ್ಟು ಸುಲಭವಾಗಿ ವರದಿಗಾರರು ಬಿಟ್ಟು ಕೊಡಲು ತಯಾರಿರಲಿಲ್ಲ.

'ದ್ರಾಕ್ಷಿ ತೋಟ ಕೊಳ್ಳಲು ನೀವು ಏನಾದರೂ ಸನ್ನಾಹ ಮಾಡಿದ್ದೀರಾ?' ಎಂದೊಬ್ಬರು ಕೇಳಿದಾಗ 'ನಿಮ್ಮ ಪತ್ರಿಕೆ ತನಿಖಾ ವರದಿಗೆ ಪ್ರಸಿದ್ಧಿ. ನೀವೇ ತನಿಖೆ ನಡೆಸಿ ತಿಳಿದುಕೊಳ್ಳಬಾರದೇಕೆ?' ಎಂದು ಮರು ಸವಾಲೆಸೆಯಿತು.

'ನಾನು ದ್ರಾಕ್ಷಿ ಹುಳಿ ಎಂದು ಹೇಳಿದೆ ಎಂದು ಯಾರಾದರೂ ಸಾಬೀತು ಮಾಡಿದರೆ ಕಾಡು ಬಿಟ್ಟು ಹೋಗುತ್ತೇನೆ. ಹಾಗೆಯೇ ಎಲ್ಲರೂ ಸಿಹಿ ದ್ರಾಕ್ಷಿಯನ್ನೇ ಎಲ್ಲರೂ ಇಷ್ಟ ಪಡುತ್ತಾರೆ ಎಂದೇನಿಲ್ಲ. ಹುಳಿ ದ್ರಾಕ್ಷಿ ತಿನ್ನುವವರೂ ಇರುತ್ತಾರೆ. ಲೋಕೋ ಭಿನ್ನ ರುಚಿಃ. ನನ್ನ ಚಾರಿತ್ರ್ಯವಧೆ ಮಾಡುತ್ತಿರುವವರು ಇದನ್ನು ನೆನಪಿನಲ್ಲಿಡಲಿ' ಎಂದು ದನಿಯೆತ್ತರಿಸಿ ಹೇಳಿ ಪತ್ರಿಕಾಗೋಷ್ಠಿಯನ್ನು ಮುಗಿಸಿತು.

■

---

**ಕಬ್ಬನ್ ಪಾರ್ಕ್ ಒಳಗೆ ಇನ್ಮುಂದೆ**
**ನಾಯಿಗಳ ಎಂಟ್ರಿ ಇಲ್ಲ**
**– ಬಿಬಿಎಂಪಿಗೆ ಹೈಕೋರ್ಟ್ ಸೂಚನೆ**



(ನೀತಿಕತೆ –ಬಲಿತವರಿಗೆ)

# ಪ್ರತ್ಯುತ್ಪನ್ನಮತಿ ಮತ್ತಿತರ ಪ್ರಸಂಗವು

● **ಜಯಶ್ರೀ ದೇಶಪಾಂಡೆ**

ಒಂದು ದೊಡ್ಡ ಕೆರೆಯಿತ್ತು ಅದರಲ್ಲಿ ಮೂರು ಮೀನುಗಳು ವಾಸವಾಗಿದ್ದುವು, ಒಂದರ ಹೆಸರು ಅನಾಗತಭಯ, ಇನ್ನೊಂದು ಪ್ರತ್ಯುತ್ಪನ್ನಮತಿ ಹಾಗೂ ಮೂರನೆಯದರ ಹೆಸರು ಯದ್ಭವಿಷ್ಯ. ಮೊದಲನೆಯ ಮೀನಿನ ಮನಸ್ಸು" ಮುಂದೊಂದು ದಿನ ಹೀಗೆ ಹೀಗೆಲ್ಲ ನಡೆಯಬಹುದಲ್ಲವೇ ಅದನ್ನು ನಾನು ಈ ರೀತಿಯ ಉಪಾಯಗಳಿಂದ ಪರಿಹರಿಸಿಕೊಳ್ಳಬಹುದಲ್ಲವೇ " ಎಂದೆಲ್ಲ ಆಲೋಚಿಸಿ ಅದರತಯಾರಿಯಲ್ಲಿರುತ್ತಿತ್ತು.

ಎರಡನೆಯ ಮೀನು "ಅಪಾಯ ಬಂದ ಸಮಯದಲ್ಲಿ ಆಲೋಚನೆ ಮಾಡಿದರಾಯಿತು. ಆ ಹೊತ್ತಿಗೆ ಏನಾದರೂ ಉಪಾಯ ತೋಚಿಯೇ ತೋಚುತ್ತದೆ. ಎಂದೋ ಬರಬಹುದಾದ ಭಯಕ್ಕೆ ಇಂದೇ ಯಾಕೆ ಅಧೈರ್ಯ ಪಡಬೇಕು " ಎಂದು ನಿಶ್ಚಿಂತೆಯಲ್ಲಿತ್ತು.

ಮೂರನೆಯದು ಮಾತ್ರ "ಈ ಪ್ರಪಂಚವೇ ಅನಿಶ್ಚಿತ.ಹಣೆಯಲ್ಲಿ ಏನು ಬರೆದಿರುತ್ತದೆಯೋ ಅದನ್ನು ಬ್ರಹ್ಮನೂ ತಪ್ಪಿಸಲು ಸಾಧ್ಯವಿಲ್ಲ. ಏನು ನಡೆಯಬೇಕೋ ನಡೆದೇ ನಡೆಯುತ್ತದೆ. ಆದ್ದರಿಂದ ಈಗ ತಲೆ ಕೆಡಸಿಕೊಂಡು ಏನು ಪ್ರಯೋಜನ "ಎಂದು ವಾದಿಸುತ್ತ ಕೂತಿತ್ತು.

ಆಗೊಂದು ದಿನ ನಾಲ್ವರು ಮೀನುಗಾರರು ಬಂದು ಕೆರೆಯ ಸುತ್ತ ಮುತ್ತ ಸುಳಿದಾಡಿದರು. ಅದನ್ನು ಕಂಡ ಮೊದಲನೆಯ ಮೀನುಅಪಾಯವನ್ನು ಗ್ರಹಿಸಿ "ಇವತ್ತು ಬಂದ ಮೀನುಗಾರರು ನಾಳೆಯೂ ಬರುತ್ತಾರೆ. ಬಲೆ ಬೀಸಲೂಬಹುದು. ಆದ್ದರಿಂದ ನಾನು ಅಪಾಯವನ್ನು ತಪ್ಪಿಸಿಕೊಳ್ಳುವುದು ಸೂಕ್ತ" ಎಂದೆಣಿಸಿ ಅಲ್ಲಿಂದ ಪರಾರಿಯಾಗಿ ಬೇರೆಡೆಗೆ ಹೋಗಿಬಿಟ್ಟಿತು. ಮತ್ತು ಬದುಕಿಕೊಂಡಿತು.

ಮಾರನೆಯ ದಿನ ಮೀನುಗಾರರು ಬಂದು ಬಲೆ ಬೀಸಿದಾಗ ಎರಡನೆಯ ಮತ್ತು ಮೂರನೆಯ ಮೀನುಗಳೆರಡೂ ಸಿಕ್ಕಿಹಾಕಿಕೊಂಡವು. ಆದರೆ ಎರಡನೆಯ ಮೀನು 'ಇವರು ಬಲೆಯ ಕುಣಿಕೆ ಎಳೆಯುವುದರೊಳಗಾಗಿ ನಾನಿಲ್ಲಿಂದ ಪಾರಾಗಬೇಕು' ಎಂದುಕೊಳ್ಳುತ್ತ ಚಾಣಾಕ್ಷತೆಯಿಂದ ನುಣುಚಿಕೊಂಡು ದೂರ ಹೋಗಿಬಿಟ್ಟಿತು. ಅದೂ ಬದುಕಿಕೊಂಡಿತು.

ಮೂರನೆಯ ಮೀನು ಯದ್ಭವಿಷ್ಯ "ಆಗಬೇಕಾದ್ದು ಆಗಿಯೇ ಆಗುತ್ತೆ. ಯಾರೂ ತಪ್ಪಿಸಲಾರರು"ಎಂದು ಬಡಬಡಿಸುತ್ತ ಆ ಮೀನುಗಾರರ ಬಲೆಯೊಳಗೆ ಉಳಿದು ತನ್ನ ಅಂತ್ಯವನ್ನು ಕಂಡಿತು.

ಈ ಜಾತಕ ಕಥೆ ಕೇಳಿದ್ದೀವಿ ತಾನೇ? ಅನಂತರ ಏನಾಯ್ತೆಂದಿರಾ?

ಕಾಲಾಂತರದಲ್ಲಿ ಆ ಮೂರು ಮೀನುಗಳೂ ಮನುಷ್ಯ ಜನ್ಮವನ್ನು ಪಡೆದುವು. ಅನಾಗತಭಯವು ಸಾಫ್ಟ್‌ವೇರ್ ಇಂಜಿನಿಯರ್ ಆಗಿಯೂ, ಪ್ರತ್ಯುತ್ಪನ್ನಮತಿಯು ಒಬ್ಬ ಮಂತ್ರಿಯ ಚೇಲಾ ಆಗಿಯೂ ಯದ್ಭವಿಷ್ಯವು ಪ್ರಸಿದ್ಧ ನಟನೊಬ್ಬನ ಉಂಡಾಡಿಗುಂಡ, ಪುಂಡ ಪೋಕರಿ ಮಗನಾಗಿಯೂ ಬೆಳೆದುವು.

ಜಗತ್ತು ನೂರಾರು ವಿಧವಾಗಿ ಒಳ್ಳೆಯದೂ ಕೆಟ್ಟದ್ದೂ ಆಗಿ ಬೆಳೆದು ಮನುಷ್ಯರ ಸ್ವಭಾವಗಳೂ ಅದೇ ಪರಿಮಾಣದಲ್ಲಿ ಆಸೆ ದುರಾಸೆಗಳಿಂದ ಕೆಟ್ಟುಗಿಟ್ಟು ಎಲ್ಲೆಲ್ಲೂ ಹಣಕಾಸಿನ ಏರಿಳಿತಗಳು ನಡೆದುವು.

ಅನಾಗತಭಯವು ತನ್ನ ಸಾಫ್ಟ್‌ವೇರ್ ಕಂಪನಿ ಮುಳುಗಬಹುದು ಎಂಬ ದೂರಾಲೋಚನೆಯಿಂದ,

ಒಂದಿಷ್ಟು ಸೂಚನೆ ಬಂದಾಕ್ಷಣವೇ ಟಪಾರ್ ಅಂತ ರಾಜೀನಾಮೆ ಬಿಸಾಕಿ ಹೊಸ ಕಂಪನಿ ಹುಡುಕಿ ಸೇರಿಕೊಂಡಿತು.

ಪ್ರತ್ಯುತ್ಪನ್ನಮತಿಯು ಮಂತ್ರಿಯ ಮಗಳನ್ನೇ ಬುಟ್ಟಿಗೆ ಹಾಕಿಕೊಂಡು ಮದುವೆ ಆಯಿತು. ಆದರೂ ಕೊನೆಗೊಮ್ಮೆ ಮಾವ ಕಾಯಿಲೆ ಬಿದ್ದು ಅವನ ಪಾರ್ಟಿ ತಳಕಿತ್ತುಕೊಂಡು ಹೊರಟಾಗ ಇನ್ನೊಂದು ಪಾರ್ಟಿಗೆ ಗಯಾರಾಮ್ ಆಗಿ ನೆಗೆದು ಉಳಿದುಕೊಂಡಿತು.

ಯದ್ಭವಿಷ್ಯವು ಎಂದೆಂದೂ ಮುಂದೇನೆಂಬ ಚಿಂತೆಯನ್ನೇ ಮಾಡದೇ, ಆಗುವುದೆಲ್ಲಾ ಆಗುತ್ತೆ ಬಿಡು ಎಂದು ನಿಶ್ಚಿಂತೆಯಾಗಿ ಅಪ್ಪನ ಕೋಟಿಕೋಟಿಗಳ ಮೇಲೆ ನೆಗೆದಾಡುತ್ತ ಕಣ್ಮುಚ್ಚಿ ಸ್ವರ್ಗಸುಖಗಳನ್ನು ಅನುಭವಿಸುತ್ತ ಒಮ್ಮೆ ಯಾವುದೋ ರಸ್ತೆಬದಿಯ ಭಿಕಾರಿಯ ಮೇಲೆ ಕಾರು ಹಾಯಿಸಿ ಒಂದಿನ ಪೋಲೀಸರ ಕೈಗೆ ಸಿಕ್ಕುಹಾಕಿಕೊಂಡು ಜೈಲ್ ಕಂಬಿ ಎಣಿಸಿತು!!

*****

ಹೊಸನೀತಿ: ಪೂರ್ಜನ್ಮದ ವಾಸನೆಗಳನ್ನು ಮಂದಿನ ಜನ್ಮಕ್ಕೆ ಕೊಂಡೊಯ್ದರೂ ಯದ್ಭವಿಷ್ಯವನ್ನನುಸರಿಸದೆ ಅವನ್ನು ಸಮರ್ಪಕವಾಗಿ ಸ್ವಂತದ ಉದ್ಧಾರಕ್ಕೆ ಬಳಸುವುದೇ ಶ್ರೇಷ್ಠವು!

■

---



ಏನು? ಫುಡ್ ಪಾಯಿಸನ್ ಆಗಿದೆಯಾ
ಇವರಿಗೆ? ಅದು ಹೇಗೆ ಡಾಕ್ಟ್ರೇ ..ಇವರು
ನಿನ್ನೆ ಉಪವಾಸ ಸತ್ಯಾಗ್ರಹಕ್ಕೆ ಹೋಗಿದ್ರು

# ಸುಳ್ಳು ಮತ್ತು ಎಚ್ಚರಿಕೆ!

**● 'ಗೌತಮ'**

**ಅಂದು:**

ಒಂದಾನೊಂದು ಕಾಡು. ಆ ಕಾಡಿನಲ್ಲಿ ಒಂದು ನರಿ. ಆ ನರಿಗೆ ದ್ರಾಕ್ಷಿ ಕಂಡರೆ ಪಂಚಪ್ರಾಣ. ಆದರೆ ಆ ಕಾಡಿನಲ್ಲಿ ಎಲ್ಲೂ ದ್ರಾಕ್ಷಿ ಬಳ್ಳಿ ಇರಲಿಲ್ಲ. ದ್ರಾಕ್ಷಿಗಾಗಿ ಹುಡುಕುತ್ತಾ ಇದ್ದಾಗ ಪಕ್ಕದಲ್ಲೇ ಇದ್ದ ಇನ್ನೊಂದು ಕಾಡಿನಲ್ಲಿ ದ್ರಾಕ್ಷಿಯ ಬಳ್ಳಿಯೊಂದು ಈ ನರಿಯ ಕಣ್ಣಿಗೆ ಬಿತ್ತು. ಹಿಗ್ಗಿ ಹೀರೇಕಾಯಿಯಾಯಿತು. ದೊಡ್ಡ ವೃಕ್ಷದಂತೆ ಬೆಳೆದಿದ್ದ ಗಿಡದ ತುಂಬಾ ದ್ರಾಕ್ಷಿ ಗೊಂಚಲುಗಳು. ಗೊಂಚಲುಗಳನ್ನು ನೋಡುತ್ತಿದ್ದ ನರಿಯಣ್ಣನಿಗೆ ಬಾಯಲ್ಲಿ ನೀರೂರಿತು. ಆದರೆ ನರಿಯ ಮುಖದ ಮೇಲೆ ನಿರಾಸೆಯ ಕಾರ್ಮೋಡ ಕವಿದಿತ್ತು. ಕಾರಣ, ಎಲ್ಲ ಗೊಂಚಲುಗಳೂ ತುಂಬ ಎತ್ತರದಲ್ಲಿ ಬಿಟ್ಟಿದ್ದವು. 'ಆಗಲಿ, ನೋಡೋಣ' ಎಂದು ಮನದಲ್ಲಿ ಯೋಚಿಸುತ್ತ ತನ್ನ ಶಕ್ತಿಯನ್ನೆಲ್ಲ ಬಿಟ್ಟು ಮೇಲಕ್ಕೆಗರಿತು. ಉಹುಂ. ಎಟುಕಲಿಲ್ಲ. ಇನ್ನೊಂದು ಸಲ, ಮತ್ತೊಂದು ಸಲ ಪ್ರಯತ್ನ ಪಟ್ಟಿತು. ನಿಲುಕಲಿಲ್ಲ. ದೂರದಿಂದ ಓಡಿ ಬಂದು ಎಗರಿತು. ಉಹುಂ. ಏನು ಮಾಡಿದರೂ ದ್ರಾಕ್ಷಿ ಎಟುಕುವಂತೆ ತೋರಲಿಲ್ಲ. ಬಾಯಲ್ಲಿ ಜೊಲ್ಲು ಸುರಿಯುವುದು ನಿಂತುಹೋಗಿ ಮುಖದಲ್ಲಿ ಬೆವರು ಸುರಿಯಲಾರಂಭಿಸಿತು. ನಿರಾಸೆಯಿಂದ ತನ್ನ ಕಾಡಿನ ಕಡೆಗೆ ಹೆಜ್ಜೆ ಹಾಕಿತು.

ಊರಿನ ಬಾಗಿಲಲ್ಲಿ ನರಿಯಣ್ಣನ ಅಪ್ಪ, ಅಮ್ಮ, ಸೋದರ, ಸೋದರಿಯರು, ಬಂಧು ಬಳಗ, ನೆಂಟರು ಇಷ್ಟರು ಎಲ್ಲರೂ ಸೇರಿಬಿಟ್ಟಿದ್ದರು. ನರಿ ಹತ್ತಿರ ಹೋಗುತ್ತಿದ್ದಂತೆ ಊರಿನ ಒಳಗೆ ಹೋಗಲು ಬಿಡದೆ 'ಥೂ ಥೂ ಹೇಡಿ ನರಿ. ದ್ರಾಕ್ಷಿ ತಿನ್ನದೆ ವಾಪಸ್ ಬಂದಿದ್ದೀಯಾ? ನಮ್ಮ ನರಿ ಕುಲಕ್ಕೇ ಅವಮಾನ. ಒಂದು ದ್ರಾಕ್ಷಿ ಕೂಡಾ ತಿನ್ನೋಕಾಗದೆ ವಾಪಸ್ ಬಂದಿದೀಯಾ ನೀನೆಂಥ ನರಿ?' ಅಂತ ಬಾಯಿಗೆ ಬಂದಂತೆ ಮಾತಾಡಲು ಷುರು ಮಾಡಿದವು. ನರಿಯಣ್ಣನಿಗೆ ಆಶ್ಚರ್ಯ, ನನಗೆ ದ್ರಾಕ್ಷಿ ಸಿಗದೇ ಇರೋ ವಿಷಯ ಇವರಿಗೆ ಹೇಗೆ ಗೊತ್ತಾಯಿತು ಅಂತ? ಎಲ್ಲರನ್ನೂ ಒಂದು ಸಲ ನೋಡಿತು. ನರಿಯಣ್ಣನ ಮಿತ್ರ ಮಿದ್ರೋ(ಮಿತ್ರದ್ರೋಹಿ) ಮುಸಿ ಉಸಿ ನಗುತ್ತಿದ್ದ. ಇವನೇ ನನ್ನನ್ನು ಹಿಂಬಾಲಿಸಿ ನನಗೆ ಗೊತ್ತಿಲ್ಲದೇ ಎಲ್ಲವನ್ನೂ ನೋಡಿ ಇಲ್ಲಿ ಬಂದು ಡಂಗೂರ ಹಾಕಿದ್ದಾನೆ ಅಂತ ಗೊತ್ತಾಯಿತು. ಇರಲಿ ಅಂದುಕೊಂಡು 'ನೋಡಿ, ನನ್ನ ಕೈಲಿ ಆಗಲಿಲ್ಲ ಅಂತ ತಿಳೀಬೇಡಿ. ಇನ್ನಷ್ಟು ಎತ್ತರದಲ್ಲಿದ್ದರೂ ಎಗರಿ ಕೀಳ್ತಾ ಇದ್ದೆ. ಆದರೆ ಆ ದ್ರಾಕ್ಷಿ ತುಂಬಾ ಹುಳಿ. ಅದಕ್ಕೇ ನಾನು ಕೀಳೋ ಪ್ರಯತ್ನ ಮಾಡಲಿಲ್ಲ. ಅದನ್ನ ತಿನ್ನೋದು ಬೇಡ ಅಂತ ನಾನೇ ತೀರ್ಮಾನಿಸಿದೆ. ಯಾರೋ ಕಿಡಿಗೇಡಿಗಳು ನಿಮಗೆಲ್ಲ ಸುಳ್ಳು ಸುಳ್ಳು ಹೇಳಿದ್ದಾರೆ' ಅಂತ ವಿವರಣೆ ಕೊಟ್ಟಿತು. ನೆರೆದವರೆಲ್ಲಾ ಒಟ್ಟಿಗೆ ನರಿಯಣ್ಣನ ಕಡೆ ತಿರುಗಿ 'ಏಯ್, ಇಲ್ಲದ್ದೆಲ್ಲಾ ಹೇಳಬೇಡ. ನೀನು ಎಗರಿ ಎಗರಿ ಕಡೇಗೆ ಆಗದೇ ವಾಪಸ್ ಬಂದಿದ್ದು ನಮಗೆ ಗೊತ್ತು. ಅಲ್ಲಪ್ಪಾ, ನೀನು ಅದರ ರುಚಿಯೇ ನೋಡೋಕಾಗಿಲ್ಲ. ಹಾಗಿರುವಾಗ ಅದು ಹುಳಿ ಅಂತ ಹೇಗೆ ಹೇಳ್ತೀಯಾ? ಅದು ಹೋಗಲಿ ದ್ರಾಕ್ಷಿ ಹುಳಿ ಅಂತ ಗೊತ್ತಿದ್ದ ಮೇಲೆ ಯಾಕೆ ಬೆವರು ಬರೋವರೆಗೂ ಎಗರಿದ್ದೂ?' ಅಂತ ಒಬ್ಬ ಬುದ್ಧಿವಂತ ನರಿ

ಕೇಳಿದಾಗ ನರಿಯಣ್ಣ ಕಣ್ಣು ಕಣ್ಣು ಬಾಯಿ ಬಾಯಿ ಬಿಟ್ಟಿತು. ಎಲ್ಲವೂ ಒಮ್ಮೆಗೇ ನಕ್ಕು ಲೇವಡಿ ಮಾಡಿದವು. ನರಿಯಣ್ಣನಿಗೆ ತುಂಬಾ ಬೇಸರವಾಗಿ ಅಳುತ್ತಾ ಊರಿನಿಂದ ದೂರ ಹೊರಟುಹೋಯಿತು.

**ನೀತಿ: ಸುಳ್ಳು ಹೇಳುವಾಗ ತುಂಬ ಎಚ್ಚರಿಕೆಯಿಂದ ಇರಬೇಕು. ಇಲ್ಲದಿದ್ದರೆ ಎಲ್ಲರ ನಿಂದನೆಗೆ ಗುರಿಯಾಗಬೇಕಾಗುತ್ತದೆ.**

**ಇಂದು:**

ನರಿ ಎಲ್ಲಿದ್ದರೂ ಯಾವಾಗಿದ್ದರೂ ನರೀನೇ. ತ್ರೇತಾಯುಗದಲ್ಲೂ ನರಿ ನರೀನೇ ಕಲಿಯುಗದಲ್ಲೂ ನರೀನೇ. ಉಗಾಂಡಾದಲ್ಲಿದ್ದರೂ ನರೀನೇ, ಉಲ್ಲಾಳದಲ್ಲಿದ್ದರೂ ನರೀನೇ. ಹಾಗಾಗಿ ನರೀಗೆ ದ್ರಾಕ್ಷಿ ಕಂಡರೆ ಪಂಚಪ್ರಾಣವೇ. ಆದರೆ, ಹಾಳಾದ್ದು ಈ ಕಾಂಕ್ರೀಟ್ ಕಾಡಲ್ಲಿ ನರಿಯಣ್ಣ ಒಂದು ದ್ರಾಕ್ಷಿಯ ಬಳ್ಳಿಯನ್ನೂ ಕಣ್ಣಾರೆ ಕಂಡಿದ್ದಿಲ್ಲ, ಅದರ ಅಪ್ಪಾ ಅಮ್ಮಂದಿರ ಬಾಯಿಂದ ಅದರ ಬಗ್ಗೆ ಕೇಳಿತ್ತು ಅಷ್ಟೇ.

ಮೊನ್ನೆ ಒಂದಿನ ಹಾಗೇ 'ಲಾಂಗ್ ವಾಕ್' ಹೋಗಿದ್ದಾಗ ನರಿಯಣ್ಣನ ಕಣ್ಣಿಗೆ ದ್ರಾಕ್ಷಿ ಬಳ್ಳಿ ಕಂಡುಬಿಟ್ಟಿತು. ಅದರ ತುಂಬ ಗೊಂಚಲುಗಳೋ ಗೊಂಚಲುಗಳು. ಯಾರಿಗೂ ಹೇಳದೇ ಜಾಗಾನ್ನ ಮನಸ್ಸಿನಲ್ಲಿಟ್ಟುಕೊಂಡು ಒಂದಿನ ಒಂಟಿಯಾಗಿ ಅಲ್ಲಿಗೆ ಹೋಯಿತು. ಹತ್ತಿರ ಹೋದಾಗಲೇ ಗೊತ್ತಾಗಿದ್ದು, ಗೊಂಚಲು ತುಂಬಾ ಎತ್ತರದಲ್ಲಿದ್ದು ತನ್ನ ಕೈಗೆ ಎಟುಕುವಂಥದ್ದಲ್ಲ ಅಂತ. ಆದರೂ ಪ್ರಯತ್ನ ಪಟ್ಟಿತು. ಪಟ್ಟೂ ಪಟ್ಟೂ ಕಾಲು ನೋಯಿಸಿಕೊಂಡದ್ದಷ್ಟೇ ಲಾಭವಾಯಿತು. ನಿರಾಸೆಯಿಂದ ಜೋಲು ಮೋರೆ ಹಾಕಿಕೊಂಡು ವಾಪಸ್ ಹೋಯಿತು. ಹೋಗ್ತಾ ದಾರೀಲಿ ಅದರಪ್ಪ ಅಮ್ಮ ಹೇಳಿದ್ದ ಕಥೆ, ಅದರ ಕೋಲುಕೋಲು ತಾತ (ಮುತ್ತಾತನ ತಾತನ ತಾತನ ತಾತ) ದ್ರಾಕ್ಷೀನ ಎಟುಕಿಸಿಕೋಳ್ಳೋಕಾಗದೆ ಎಲ್ಲರಿಂದ ಥೂ ಛೀ ಅನ್ನಿಸಿಕೊಂಡದ್ದು, ನೆನಪಿಗೆ ಬಂತು. ಊರು ಸೇರೋಷ್ಟರಲ್ಲಿ ಊರವರನ್ನ ಎದುರಿಸೋಕೆ ಸಿದ್ಧವಾಯಿತು.

ಅದೇ ನರಿ ಬಳಗ. ಅದೇ ಮಿದ್ರೋ. ಅದೇ ಬೈಗಳು. ಅದೇ ಛೀಮಾರಿ. ಅವರ ಮಾತುಗಳು ನಿಲ್ಲದೇನೇ ಇದ್ದಾಗ ಒಂದು ಸಲ ಜೋರಾಗಿ ಕೂಗಿತು 'ಷಟಪ್' ಅಂತ. ಎಲ್ಲರೂ ಗಪ್ ಚುಪ್. 'ಹೌದು. ನಾನು ದ್ರಾಕ್ಷಿಯನ್ನ ತಿನ್ನೋಕೆ ಅಂತ ಎಗರಿದ್ದು ನಿಜ. ಆದರೆ, ಅಷ್ಟರಲ್ಲಿ ನನಗೆ ನೆನಪಿಗೆ ಬಂತು. ಎಗರೋದನ್ನ ನಿಲ್ಲಿಸಿ ಗೂಗಲ್ ನೋಡಿದೆ. ದ್ರಾಕ್ಷಿ ವೆಬ್ ಸೈಟಿಗೆ ಹೋದೆ. ಅಬ್ಬ ಅಂತ ನಿಟ್ಟುಸಿರಿಟ್ಟೆ. ಅದನ್ನ ತಿಂದರೆ ತಿಂದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಒಮಿಕ್ರಾನ್ ಅಮರಿಕೊಳ್ಳತ್ತೆ ಅಂತ ಇತ್ತು. ಸಧ್ಯ ಬದುಕಿದೆಯಾ ಬಡಜೀವವೇ ಅಂತ ಎಗರೋದನ್ನ ನಿಲ್ಲಿಸಿ ಅದರ ಕಡೇನೂ ನೋಡದೆ ಸೇಫಾಗಿ ಬಂದಿದ್ದೀನಿ. ಎಷ್ಟು ಬೇಕಾದರೂ ತಂದುಕೊಡ್ತೀನಿ. ನೀವೇ ತಿಂದು ಚೆಕ್ ಮಾಡಿ. ಆಯ್ತಾ?' ಅಂತು.

ನೆರೆದಿದ್ದ ನರಿಬಳಗ ಒಂದರ ಮುಖವನ್ನು ಒಂದು ನೋಡಿಕೊಂಡು ತೆಪ್ಪಗೆ ಹಿಂತಿರುಗಿದವು.

**ನೀತಿ:**

**1. ನಮ್ಮ ವೀಕ್ನೆಸ್ಸನ್ನ ಎಂದಿಗೂ ಬೇರೆಯವರೆದುರಿಗೆ ತೋರಿಸಿಕೊಳ್ಳಬಾರದು.**

**2. ನಮ್ಮ ವೀಕ್ನೆಸ್ಸನ್ನ ಮುಚ್ಚಿಹಾಕಲು ನಿಜದ ತಲೆ ಮೇಲೆ ಹೊಡೆದ ಹಾಗೆ ಸುಳ್ಳನ್ನು ಹೇಳಬೇಕು**

■

# ಮೀನಾಕುಮಾರಿ ಮತ್ತು ಮಿಸ್ಟರ್. A. D.

● ಚಿತ್ರಾ ರಾಮಚಂದ್ರನ್

ಮೀನಾಕುಮಾರಿ ಪುಣ್ಯ ಕ್ಷೇತ್ರದ ಪುಣ್ಯ ನದಿಯಲ್ಲಿ ವಾಸವಾಗಿದ್ದ ಸುಂದರವಾದ ಮೀನು! ಅಪಾರ ಲೋಕಜ್ಞಾನವನ್ನು ಸಹ ಅವಳು ಹೊಂದಿದ್ದಳು. ಕಾರಣ ಒಂದು ವಾಟರ್ ಪ್ರೂಫ್ ಸ್ಮಾರ್ಟ್ ಫೋನ್! ಒಮ್ಮೆ ಪುಣ್ಯ ಕ್ಷೇತ್ರಕ್ಕೆ ಆಗಮಿಸಿದ್ದ ಭಕ್ತನೋರ್ವನು ನದಿಯಲ್ಲಿಯ ಮೀನುಗಳಿಗೆ ಕಡಲೆ ಪುರಿ ಹಾಕುತ್ತಿರಲು, ಅವನ ಸ್ಮಾರ್ಟ್ ಫೋನ್ ಕೈ ಜಾರಿ ನೀರಿಗೆ ಬಿದ್ದಿತ್ತು. ಮೀನಾಕುಮಾರಿ ಆ ಫೋನನ್ನು ದೂಡಿಕೊಂಡು ಹೋಗಿ ಬಂಡೆ ಸಂದಿನಲ್ಲಿ ಬಚ್ಚಿಟ್ಟುಕೊಂಡಿದ್ದಳು. ಮಿಸ್ಟರ್. A. D. ಎಂಬ ಏಡಿ ಗೆಳೆಯನೊಂದಿಗೆ ಆ ಫೋನಿನಲ್ಲಿ ಬಗೆಬಗೆಯ ಕಾರ್ಯಕ್ರಮಗಳನ್ನು ನೋಡುವುದು ಅವಳ ಹವ್ಯಾಸ. ಆಗಿಂದಾಗ್ಯೆ ಫೋನಿಗೆ ಸೌರ ಶಕ್ತಿಯನ್ನು ಒದಗಿಸುತ್ತಿದ್ದಳು.

ಸೌಂದರ್ಯ ವರ್ಧಕ ಟಿಪ್ಸ್ಗಳನ್ನೂ ಇನ್ನಿತರ ಲೌಕೀಕ ವಿಷಯಗಳನ್ನೂ ಯೂಟ್ಯೂಬ್ ಮೂಲಕ ಅರಿತುಕೊಂಡಿದ್ದಳು ಮೀನಾಕುಮಾರಿ. ಆರೋಗ್ಯಕರ ಡಯಟ್ ಬಗ್ಗೆ ಕಾರ್ಯಕ್ರಮಗಳನ್ನು ನೋಡಿ ಜಲಸಸ್ಯಗಳನ್ನು ಮಾತ್ರ ಸೇವಿಸ ತೊಡಗಿದ್ದಳು. ಜಿಮ್ನಾಸ್ಟಿಕ್ಸ್ ಸಹ ಕಲಿತಿದ್ದಳು. ಇದರಿಂದಾಗಿ ದಿನೇ ದಿನೇ ಅವಳ ಸೌಂದರ್ಯ ವೃದ್ಧಿಯಾಗುತ್ತಲೇ ಹೋಯಿತು.

ಛಂಗೆಂದು ನೀರಿನ ಹರಹಿನ ಮೇಲೆ ನೆಗೆದು ಕುಣಿದು ತನ್ನ ರೂಪ ಲಾವಣ್ಯಗಳನ್ನು ಮೆರೆಸುತ್ತಿದ್ದಳು ಮೀನಾಕುಮಾರಿ. ಗೆಳತಿಯ ಜಿಮ್ನಾಸ್ಟಿಕ್ಸ್ ನೋಡಿ ಸಂತಸದಿಂದ ತನ್ನ ಇಕ್ಕಳದಂತ ಪಿನ್ಸರ್ಗಳನ್ನು ಕ್ಲಿಕ್ಕಿಸಿ ಚಪ್ಪಾಳೆ ತಟ್ಟುತ್ತಿದ್ದ A. D.

ಹೀಗೆಲ್ಲ ನೆಗೆದಾಡಿ ಸೌಂದರ್ಯ ಪ್ರದರ್ಶಿಸಿ ಅಪಾಯವನ್ನು ತಂದುಕೊಳ್ಳುವುದು ಒಳಿತಲ್ಲ ಎಂಬ ಹಿರಿಯರ ಬುದ್ಧಿವಾದಗಳನ್ನೆಲ್ಲ ಅವಳು ಲೆಕ್ಕಿಸಲೇ ಇಲ್ಲ.

"ಸಂತೋಷ ಮತ್ತು ಸ್ವಾತಂತ್ರ್ಯ ನನ್ನ ಹಕ್ಕು! ನನ್ನನ್ನು ಕಾಪಾಡಿಕೊಳ್ಳುವ ಸಾಮರ್ಥ್ಯ ನನಗಿದೆ!" ಎಂದು ಮೊಳಗುತ್ತಿದ್ದಳು.

ಚಳಿಗಾಲ ಬಂತು. ನದಿಯ ನಡುಗಡ್ಡೆಗೆ ವಿದೇಶೀ ಹಕ್ಕಿಗಳು ವಲಸೆ ಬಂದವು. ಆಹಾರ ಹುಡುಕುವ ಶಕ್ತಿ ಇಲ್ಲದೆ ರೆಕ್ಕೆ ಸೋತು ನದಿಯಂಚಿನಲ್ಲೇ ಕಾಲು ಚಾಚಿ ಕುಳಿತುಬಿಟ್ಟಿತು ಮುದಿ ಕೊಕ್ಕರೆಯೊಂದು. ಇದ್ದಕ್ಕಿದ್ದಂತೆ ನೀರಿನ ಹರಹಿನ ಮೇಲೆ ನೆಗೆದಾಡುತ್ತಿದ್ದ ಮೀನಾಕುಮಾರಿ ಅದರ ಗಮನ ಸೆಳೆದಳು.

' ಆಹಾ! ಎಷ್ಟು ಸುಂದರವಾದ, ಆರೋಗ್ಯಕರವಾದ, ಪುಷ್ಟಿಯಾದ ದೊಡ್ಡ ಮೀನು! ಇದೇ ನನಗೆ ಬೇಕಾಗಿರುವ ಶಕ್ತಿ ವರ್ಧಕ ಟಾನಿಕ್! ಇದನ್ನು ತಿಂದರೆ ನನ್ನ ಸುಸ್ತೆಲ್ಲ ಮಾಯವಾಗುವುದು ಖಚಿತ! ಆದರೆ ಇಷ್ಟು ಲವಲವಿಕೆಯಿಂದಿರುವ ಮೀನನ್ನು ಬಲಹೀನನಾಗಿರುವ ನಾನು ಹಿಡಿಯುವುದಾದರೂ ಹೇಗೆ ? ' ಎಂದು ಯೋಚಿಸಿತು. ಕೊನೆಗೊಂದು ಉಪಾಯ ಹೊಳೆಯಿತು.

" ಓ ಮೀನೇ! ನಿಜಕ್ಕೂ ನೀನು ಬಹಳ ಸುಂದರವಾಗಿದ್ದೀಯೆ! " ಎಂದು ಮೀನಾಕುಮಾರಿಯನ್ನು ಕೂಗಿ ಹೇಳಿತು ಮುದಿ ಕೊಕ್ಕರೆ.

"ಹೇ! ಓಲ್ಡ್ ಮ್ಯಾನ್! ನನ್ನನ್ನು ಮೀನು ಗೀನು ಅಂತ ಕರೆಯಬೇಡ! ನನ್ನ ಹೆಸರು ಮೀನಾಕುಮಾರಿ! ಮೈಂಡ್ ಇಟ್! " ಎಂದು ಕೋಪದಿಂದ ನುಡಿದಳು ಮೀನಾಕುಮಾರಿ.

"ಸಾರೀ ಮ್ಯಾಡಮ್! ಪ್ರಪಂಚವನ್ನೆಲ್ಲ ಹಾದು ನಾನು ಮೊನ್ನೆಯಷ್ಟೇ ವಿದೇಶದಿಂದ ಇಲ್ಲಿಗೆ ಬಂದಿರುವೆ! ಹಾಗಾಗಿ ನಿನ್ನ ಹೆಸರು ನನಗೆ ತಿಳಿದಿರಲಿಲ್ಲ! "

"ವಿದೇಶದಿಂದಲೇ ? ಹಾಗಾದರೆ ಅಲ್ಲಿಯ ಕಥೆಗಳನ್ನೆಲ್ಲ ನನಗೆ ಹೇಳು! " ಕುತೂಹಲದಿಂದ ಸಮೀಪಕ್ಕೆ ಈಜಿ ಬಂದಳು ಮೀನಾಕುಮಾರಿ.

"ಬೇಡ ಮೀನಾಕುಮಾರಿ! ಕೊಕ್ಕರೆಗಳನ್ನ ನಾವು ನಂಬಲೇ ಬಾರದು! ಎಂದಿಗೂ ಅವು ನಮ್ಮ ವೈರಿಗಳು! ' ಎಂದು A. D. ಎಚ್ಚರಿಸಿದ.

"ನೀನೇನೂ ಹೆದರಬೇಕಿಲ್ಲ ಫ್ರೆಂಡ್! ನನಗೆ ವಯಸ್ಸಾಗಿರುವ ಕಾರಣ ನಾನು ಸಸ್ಯಾಹಾರಿ ಆಗಿಬಿಟ್ಟಿದ್ದೀನಿ! ನಿಮ್ಮನ್ನ ನಾನು ಏನೂ ಮಾಡುವುದಿಲ್ಲ! " ಎಂದು A. D. ಗೆ ಭರವಸೆ ನೀಡಿತು ಕೊಕ್ಕರೆ.

ವಿದೇಶದ ಕಥೆಗಳನ್ನೆಲ್ಲ ಅವರಿಬ್ಬರಿಗೂ ಹೇಳತೊಡಗಿತು. ಮೀನಾಕುಮಾರಿಯ ಜೊತೆ ಆ ದಪ್ಪ ಏಡಿಯನ್ನೂ ತಿನ್ನುವ ಆಸೆ ಕೊಕ್ಕರೆಗೆ.

" ಅಂತಹ ಅದ್ಭುತವಾದ ದೇಶಗಳಿಗೆ ಹೋಗಲು ನಿಮಗೇ ಇಷ್ಟವಿಲ್ಲವೇ?" ಎಂದು ಮಾತಲ್ಲೇ ಬಲೆಯನ್ನು ಬೀಸಿತು

" ಈ ನಮ್ಮ ಪವಿತ್ರ ನದಿಯಂತಹ ನದಿಗಳು ಅಲ್ಲಿ ಇವೆಯೇ ? ನಾನು ತಿನ್ನುವಂತಹ ಜಲಸಸ್ಯಗಳು ಅಲ್ಲಿ ದೊರಕುವುದೇ ? "

" ಓ! ಸಸ್ಯ ರಾಶಿಗಳಿಂದ ಕೂಡಿದ ದಕ್ಷಿಣ ಅಮೇರಿಕಾದ ಕಾಡುಗಳಲ್ಲಿ ಇದಕ್ಕಿಂತ ದೊಡ್ಡದಾದ ನದಿ ಒಂದಿದೆ. ಎಲ್ಲ ಋತುಮಾನದಲ್ಲೂ ಉಕ್ಕಿ ಪ್ರವಹಿಸುವ ಜಲರಾಶಿಯಿಂದ ಕೂಡಿದ ನದಿ! ನಿನ್ನಂತಹ ಸುಂದರಿ ವಾಸಮಾಡಲು ಅರ್ಹವಾದ ಭವ್ಯ ನದಿ! ಅಮೆಜಾನ್ ನದಿ! "

ಮೀನಾಕುಮಾರಿ ಆಶ್ಚರ್ಯದಿಂದ ಬಾಯಿ ಬಿಟ್ಟಳು.

" ಇನ್ನೊಂದು ಗುಟ್ಟಿನ ವಿಷಯ ಹೇಳಲೇ ?! ನಾನು ಹಾರುತ ಬರುವಾಗ ವಿಧಾನ ಸಭೆಯಲ್ಲಿ ನಡೆಯುತ್ತಿದ್ದ ಮಾತುಕಥೆಗಳು ಕಿವಿಗೆ ಬಿತ್ತು. ಈ ನದಿಯ ದಂಡೆಯಲ್ಲಿ ನಾಲಕ್ಕು ಕಾರ್ಖಾನೆಗಳು ನಿರ್ಮಾಣವಾಗಲಿವೆಯಂತೆ! ಅವುಗಳ ವಿಷ ಭರಿತ ಕೊಳಚೆ ನೀರನ್ನ ಈ ನದಿಯಲ್ಲಿ ವಿಸರ್ಜನೆ ಮಾಡುವ ಯೋಜನೆಯೂ ಇದ್ದಂತಿದೆ! ಹಾಗೆ ಮಾಡಿದಲ್ಲಿ ನಿನ್ನ ಸೌಂದರ್ಯಕ್ಕೆ ಹಾನಿಯಾಗುವುದಲ್ಲದೆ ನಿನ್ನ ಪ್ರಾಣಕ್ಕೂ ಅಪಾಯವಾಗುವುದಲ್ಲವೇ ? ನೀನು ಆದಷ್ಟು ಬೇಗ ಈ ನದಿ ಬಿಟ್ಟು ಹೊರಟುಬಿಟ್ಟರೆ ಒಳ್ಳೆಯದು!" ಎಂದಿತು ಮುದಿ ಕೊಕ್ಕರೆ.

ಮೀನಾಕುಮಾರಿ ಯೋಚಿಸಿದಳು. 'ಕಾರ್ಖಾನೆಯ ಬಗ್ಗೆ ಈ ಕೊಕ್ಕರೆ ಪ್ರಸ್ತಾಪಿಸಿದ್ದೆಲ್ಲ ಬರಿ ಸುಳ್ಳು ಸುದ್ದಿ! ಹಾಗೇನಾದರೂ ಗುಟ್ಟಿನ ವ್ಯವಹಾರ ಇದ್ದಿದ್ದರೆ ನಮ್ಮ ಸುದ್ದಿ ವಾಹಿನಿಗಳು ಅವನ್ನು ಮೂಸಿಕೊಂಡು ಹೋಗಿ ಬ್ರೇಕಿಂಗ್ ನ್ಯೂಸ್

ಹಾಕುತ್ತಿರಲಿಲ್ಲವೇ ? ಯಾವುದಕ್ಕೂ ಒಮ್ಮೆ ಡಬಲ್ ಚೆಕ್ ಮಾಡೋದು ಸೂಕ್ತ!' ಎಂದುಕೊಂಡಳು.

" ನೀನು ಮಾತ್ರ ಹೂಂ ಅನ್ನು! ಈಗಲೇ ನಿನ್ನನ್ನು ಹೊತ್ತುಕೊಂಡು ಹೋಗಿ ಅಮೆಜಾನ್ ನದಿಗೆ ತಲುಪಿಸುವೆ!" ಎಂದಿತು ಕಳ್ಳ ಕೊಕ್ಕರೆ.

" ಸರಿ! ನಾನು ಹೋಗಿ ನನ್ನವರಿಗೆಲ್ಲ ವಿಷಯ ತಿಳಿಸಿ ಬರುವೆ! ನಮ್ಮ ಇಡೀ ಸಮೂಹವನ್ನು ಈ ಕಂಟಕದಿಂದ ಕಾಪಾಡಿ ಜೊತೆಗೆ ಕರೆದೊಯ್ಯಬೇಕು! " ಎನ್ನುತ್ತ ' ಡುಬುಕ್ ' ಎಂದು ನದಿಯಲ್ಲಿ ಮುಳುಗಿ ಸರ ಸರ ಈಜಿ ಹೋದಳು ಮೀನಾಕುಮಾರಿ.

ದೊರಕಲಿರುವ ರಾಜ ಔತಣವನ್ನು ನೆನೆದು 'ವಿವಾಹ ಭೋಜನವಿದು...' ಎಂದು ಬೀಗಿದ ಕೊಕ್ಕರೆಯ ಬಾಯಲ್ಲಿ ನೀರೂರಿತು.

" ಮೀನಾಕುಮಾರಿ! ನೀನು ಏನು ಮಾಡಲು ಹೊರಟಿರುವೆ ? ಆ ಕೊಕ್ಕರೆಯನ್ನು ನಂಬಿ ನೀನು ಬಲಿಯಾಗುವುದಲ್ಲದೆ ನಮ್ಮೆಲ್ಲರನ್ನೂ ಬಲಿ ಕೊಡಲಿರುವೆ ಎಂಬ ಅರಿವಾದರೂ ನಿನಗೆ ಇದೆಯೇನು ?" ಮೀನಾಕುಮಾರಿಯನ್ನು ಹಿಂಬಾಲಿಸಿದ A. D. ಕೋಪದಿಂದ ಗುಡುಗಿದ.

" ಮೈ ಡಿಯರ್ A. D.! ಕೂಲ್! ಕೂಲ್! ನನ್ನನ್ನೇನು ಪೆದ್ದಂಬಟ್ಟಿ ಅಂದುಕೊಂಡೆಯಾ ? ಯೂಟ್ಯೂಬಲ್ಲಿ ಕೊಕ್ಕರೆ ಮತ್ತು ಏಡಿ ಕಥೆಯ ಚಿತ್ರವನ್ನು ನಾವಿಬ್ಬರೂ ನೋಡಿಲ್ಲವೇನು ? ದಿಸ್ ಓಲ್ಡ್ ಮ್ಯಾನ್ ಇಸ್ ಟ್ರೈಯಿಂಗ್ ದಿ ಸೇಮ್ ಓಲ್ಡ್ ಟ್ರಿಕ್! ಅಷ್ಟು ದೂರವಿರುವ ಅಮೆಜಾನ್ ನದಿಗೆ ಈ ಕಿಲಾಡಿ ಕೊಕ್ಕರೆಯ ಕೊಕ್ಕಿನಲ್ಲಿ ಕುಳಿತುಕೊಂಡು ಹೋಗುವುದಕ್ಕೆ ನನಗೇನು ತಲೆ ಕೆಟ್ಟಿದೆಯೇ ? " ಎಂದು ಗಂಭೀರವಾಗಿ ನುಡಿದಳು ಮೀನಾಕುಮಾರಿ.

" ತಿಳಿದೂ ತಿಳಿದೂ ಮತ್ತೇಕೆ ಈ ಸಾಹಸಕ್ಕೆ ಮೂಗು ಹಾಕಿರುವೆ ? " ಆಶ್ಚರ್ಯದಿಂದ ಕೇಳಿದ A. D.

" ಆ ನಯವಂಚಕನಿಗೆ ತಕ್ಕ ಶಾಸ್ತಿ ಮಾಡಬೇಡವೇ ? " ಸ್ಮಾರ್ಟ್ ಫೋನಲ್ಲಿ ಸುದ್ದಿಗಳನ್ನು ಚೆಕ್ ಮಾಡುತ್ತ ನುಡಿದಳು ಮೀನಾಕುಮಾರಿ.

" ಆ ಕೆಲಸ ನನಗೆ ಬಿಡು! ನಾನೇ ಅವನೊಂದಿಗೆ ಮೊದಲು ಹೊರಡುವೆ! ಅವನ ಕುತ್ತಿಗೆಯನ್ನು ನನ್ನ ಇಕ್ಕಳದಂತ ಕೊಂಡಿಗಳಿಂದ ಬಿಗಿದು ಕತ್ತರಿಸಿ ಹಾಕುವೆ!" ಎಂದು ವೀರಾವೇಶದಿಂದ ಘೋಷಿಸಿದ A. D.

" ಈ ಬಾರಿ ಆ ಕೆಲಸ ನಾನೇ ಮಾಡುವೆ ಗೆಳೆಯ! " ಧೈರ್ಯದಿಂದ ನುಡಿದು ಫೋನ್ ಆಫ್ ಮಾಡಿದಳು ಮೀನಾಕುಮಾರಿ.

" ಅಯ್ಯೋ! ಅದು ಹೇಗೆ ಸಾಧ್ಯ ಗೆಳತಿ ? "

" ನಾಜೂಕಾದ ಸುಂದರಿಯಾಗಿದ್ದ ಮಾತ್ರಕ್ಕೆ ಬಲಹೀನಳಾಗಿರಬೇಕೇನು! ನನ್ನ ಸಾಮರ್ಥ್ಯವನ್ನು ನೀನೇ ನೋಡುವೆಯಂತೆ ಬಾ! "

ಮೀನಾಕುಮಾರಿ ಮತ್ತು A. D. ತನ್ನನ್ನು ಕುರಿತು ಈಜಿ ಬರುವುದು ಕಂಡು

ಕೊಕ್ಕರೆಗೆ ಮಹದಾನಂದವಾಯಿತು.

"ಸರಿ! ನಾವು ರೆಡಿ! ಮೊದಲು ನಾನೇ ಬರುವೆ! ನಿನಗೆ ನೀರಿಗಿಳಿಯುವ ಶ್ರಮ ಬೇಡ! ನಾನು ನೀರಿನ ಹರಹಿನ ಮೇಲೆ ಜಿಗಿಯುವೆ! ಆ ಸಮಯದಲ್ಲಿ ನೀನು ಚಕ್ಕೆಂದು ನನ್ನನ್ನು ಹಿಡಿದುಕೊ! "

"ಮೀನಾಕುಮಾರಿ! ಹುಷಾರು! " ಆತಂಕದಿಂದ ಗುಟ್ಟಾಗಿ ನುಡಿದನು A. D.

ಬಂಡೆಯಮೇಲೆ ತಲೆಯಿಟ್ಟು ಬಾಯಿ ತೆರೆದು ಮಲಗಿದ್ದ ಮೊಸಳೆಯನ್ನು ಆಗಲೇ ನೋಡಿದ್ದಳು ಮೀನಾಕುಮಾರಿ. ಕೂಡಲೇ ಥಂಗೆಂದು ನೀರಿನ ಹರಹಿನ ಮೇಲೆ ಜಿಗಿದು, ತೆರೆದಿದ್ದ ಮೊಸಳೆಯ ಬಾಯಿಯ ಮೂಲಕ ಈ ಬದಿಯಿಂದ ಆ ಬದಿಗೆ ಕ್ಷಣಮಾತ್ರದಲ್ಲಿ ತೂರಿ ಹೋದಳು.

ತಿನ್ನುವ ಆತುರದಿಂದ ಮೀನಾಕುಮಾರಿಯನ್ನು ಹಿಂಬಾಲಿಸಿತು ಕೊಕ್ಕರೆ. ಈ ಗದ್ದಲ ಕೇಳಿ ಇದೀಗ ಕಣ್ಣು ಬಿಟ್ಟಿತ್ತು ಮೊಸಳೆ. ತನ್ನ ಬಾಯಲ್ಲಿ ತೂರುತ್ತಿದ್ದ ಕೊಕ್ಕರೆಯನ್ನು ಕಂಡು, ತನ್ನ ತೆರೆದ ಬಾಯನ್ನು ಕೋಪದಿಂದ ಗಬಕ್ ಎಂದು ಮುಚ್ಚಿತು.

ಮೋಸಗಾರ ಕೊಕ್ಕರೆಗೆ ತಕ್ಕ ಶಾಸ್ತಿಯಾಯಿತು!

" ಅಂತೂ ನೀನು ತುಂಬಾ ಧೈರ್ಯವಂತೆ ಮೀನಾಕುಮಾರಿ! ಹ್ಯಾಟ್ಸ್ ಆಫ್! "A. D.ಗೆ ಎಲ್ಲಿಲ್ಲದ ಸಂಭ್ರಮ.

"ಯಾರೂ ಬಲಹೀನರಲ್ಲ ಗೆಳೆಯ! ಹೆಣ್ಣಾಗಲಿ ಗಂಡಾಗಲಿ ಬುದ್ಧಿ ಉಪಯೋಗಿಸಿದರೆ ಎಲ್ಲರಿಗೂ ಎಲ್ಲವೂ ಸಾಧ್ಯ! ಉಪಾಯದಿಂದ ಅಪಾಯವನ್ನು ಹೇಗೆ ತಪ್ಪಿಸಿದೆ ನೋಡು!" ಎನ್ನುತ್ತ ಪುಣ್ಯ ನದಿಯ ಹರಹಿನ ಮೇಲೆ ಥಂಗ್ ಎಂದು ಜಿಮ್ನಾಸ್ಟಿಕ್ಸ್ ಮಾಡಲು ತೊಡಗಿದಳು ಮೀನಾಕುಮಾರಿ – ದಿ ಬ್ಯೂಟಿ ವಿತ್ ಬ್ರೈನ್ಸ್!

■




ನೀನು ಮುಂದೊಂದ್ ದಿನ ಕಾರ್ ತಗೊಂಡ್ ಓಡಾಡ್ಬೇಕಲ್ಲ...
ಅದ್ಕೇ ನಿಮ್ ಹಳ್ಳೀಲಿ ಕೊಳಚೆ, ಚರಂಡಿ ಎಲ್ಲಾ ಹಾಗೇ ಬಿಟ್ಟಿದ್ದು...

# ನಿಮ್ಮ ಚಪ್ಪಲಿಗೆ ನೀವೇ ಜವಾಬ್ದಾರರು!

**● ಅನಿತಾ ನಾಡಿಗ್**

ಈ ಭೂಮಿ ಮೇಲೆ ತನ್ನನ್ನು ತಾನು ತುಂಬಾ ಮುತುವರ್ಜಿಯಿಂದ ನೋಡ್ಕೊಳೋ ಜೀವಿ ಅಂದ್ರೆ ಮನುಷ್ಯ ಅನ್ಸತ್ತೆ. ತಲೆ ಇಂದ ಪಾದದವರೆಗೆ, ನಾವು ಮನುಷ್ಯರು ಅದೆಷ್ಟು ರೀತಿಯಲ್ಲಿ ನಮ್ಮನ್ನ ರಕ್ಷಿಸಿಕೊಳ್ತೀವಿ. ಬಿಸಿಲು ತಡೆಯಕ್ಕೆ ತಲೆಗೆ ಟೋಪಿ ಆದರೆ, ಕಣ್ಣಿಗೆ ಕಪ್ಪು ಕನ್ನಡಕ. ಚರ್ಮಕ್ಕೆ ಸನ್‌ಸ್ಕ್ರೀನ್ ಲೋಷನ್. ಚಳಿಗೆ ಸ್ವೆಟರ್. ಮುಖ ಒಡೆಯತ್ತೆ, ಮೈ ಒಡೆಯತ್ತೆ ಅಂತ ಮಾಯಿಸ್ಚರೈಸರ್. ಮಳೆಗೆ ಛತ್ರಿ, ರೈನ್ ಕೋಟು. ಹೀಗೆ, ಕಾಲಕ್ಕೆ ತಕ್ಕಂತೆ ಬೇರೆಬೇರೆ ರಕ್ಷಾ ಕವಚಗಳನ್ನ ಮಾಡ್ಕೊಂಡಿದೀವಿ. ಎಲ್ಲಾ ಕಾಲದಲ್ಲೂ ನಾವು ಬಳಸುವ ಒಂದು ರಕ್ಷಾ ಕವಚ ಅಂದ್ರೆ, ಅದು ಚಪ್ಪಲಿ! ಮುಂಚೆ ಚಪ್ಪಲಿ ಅಂದ್ರೆ, ಸ್ವಲ್ಪ ಹೀನಾಯವಾಗಿ ನೋಡ್ತಾ ಇದ್ರು. ಗಾದೆನೆ ಇತ್ತಲ್ಲ. 'ಚಪ್ಪಲಿನ ಎಲ್ಲಿ ಇಡಬೇಕೋ ಅಲ್ಲಿ ಇಡಬೇಕು' ಅಂತ. ಈಗ ಹಾಗಲ್ಲ ಬಿಡಿ. ಕಾಲ ಬದಲಾದ ಹಾಗೆ, ಚಪ್ಪಲಿ ಬೆಲೆ, ನಾವು ಅದನ್ನ ನೋಡೋ ರೀತಿ, ಉಪಯೋಗಿಸೋ ರೀತಿ ಎಲ್ಲಾ ಬದಲಾಗಿದೆ. ವರಾಂಡದ ಒಂದು ಮೂಲೆಯಲ್ಲಿ ಇರ್ತಿದ್ದ ಚಪ್ಪಲಿ ಈಗ ಬೆಡ್ರೂಮ್ ವಾರ್ಡ್ರೋಬಿನವರೆಗೂ ಬಂದುಬಿಟ್ಟಿದೆ!

ನಮ್ಮ ಮನೇಲಿ, ನಾವು ಸೋದರ ಸಂಬಂಧಿಗಳೆಲ್ಲ, ಅಂದ್ರೆ ಕಸಿನ್ಸ್ ಎಲ್ಲ ಒಟ್ಟಿಗೆ ಸೇರಿದಾಗ ಈ ಚಪ್ಪಲಿ ವಿಷಯ ಮಾತಿಗೆ ಬರತ್ತೆ. ಯಾಕೆ ಅಂತ ಗೊತ್ತಿಲ್ಲ. ಪ್ರತಿ ಸಲ, ಈ ವಿಷಯ ಬಂದಾಗ ಸುಮಾರು ಒಂದು– ಒಂದೂವರೆ ಗಂಟೆ ಚಪ್ಪಲಿ ಪ್ರಸಂಗಗಳ ವಿನಿಮಯ ಆಗತ್ತೆ. ಈ ಚಪ್ಪಲಿ ಪ್ರಸಂಗಗಳು, ನನ್ನನ್ನು ಸಣ್ಣೋಳಿದ್ದಾಗಿಂದ ಕಾಡ್ತಾನೇ ಇವೆ. ಚಪ್ಪಲಿ ಜೊತೆ ನನಗೆ, ಅದೇನು ಅವಿನಾಭಾವ ಸಂಬಂಧಾನೋ ಗೊತ್ತಿಲ್ಲ.

ನಾನು ಚಿಕ್ಕೋಳಾಗಿದ್ದಾಗ ಚಪ್ಪಲಿ ವಿಷಯ ಬಂದಾಗೆಲ್ಲ ದೊಡ್ಡೋರಿಂದ ಒಂದು ಸ್ಟ್ಯಾಂಡರ್ಡ್ ಡೈಲಾಗ್ ಕೇಳ್ತಾ ಇದ್ದಿದ್ದು ನೆನಪಿದೆ. 'ನಾವು ಯಾವ ವಯಸ್ಸಿಗೆ ಚಪ್ಪಲಿ ಹಾಕಿದ್ದು ಗೊತ್ತ? ' ಅಂತ. ಅವರ ಈ ಡೈಲಾಗ್ ಕೇಳೇ, ಚಪ್ಪಲಿ ಕೊಡಿಸಿ ಅಂತ ಕೇಳೋದು ಏನೋ ಮಹಾ ಅಪರಾಧ ಅನ್ನೋ ಮನೋಭಾವದಲ್ಲೇ ನಾನು ಬೆಳೆದೆ.

ನಾನು ಬೆಳೆದಿದ್ದು ಸಣ್ಣ ಊರುಗಳಲ್ಲಿ. ಊರು ಇರ್ತ ಇದ್ದದ್ದೇ ಒಂದು ಕಿಲೋಮೀಟರು ಉದ್ದ ಅರ್ಧ ಕಿಲೋಮೀಟರು ಅಗಲ. ಹಾಗಾಗಿ ನಮ್ಮ ಓಡಾಟಾನು ಕಮ್ಮಿ ಇರ್ತ ಇತ್ತು. ಆಗೆಲ್ಲ ನನಗೆ ನೆನಪಿರೋ ಹಾಗೆ, ಚಪ್ಪಲಿ ಅಂದ್ರೆ ಹವಾಯ್ ಚಪ್ಪಲಿ. ಒಂದು ಜೊತೆ ಚಪ್ಪಲಿ ಕೊಡಿಸಿದ್ರೆ, ಅದು ಚಿಕ್ಕದಾಗಿ, ಹಾಕಕ್ಕೆ ಆಗಬಾರದು, ಇಲ್ಲ ಹರಿದು ಹೋಗಬೇಕು. ಆಗಲೇ ಇನ್ನೊಂದು ಜೊತೆ ಚಪ್ಪಲಿ ನಮಗೆ ಸಿಗ್ತಾ ಇದ್ದಿದ್ದು.

ಹೀಗಿದ್ದಾಗ, ಒಂದು ಸಲ ಬೆಂಗಳೂರಿನಲ್ಲಿದ್ದ ನಮ್ಮ ದೊಡ್ಡಮ್ಮನ ಮನೆಗೆ ಹೋದ್ವಿ. ಅವರ ಮನೆ ಹತ್ರ ಯಾರೋ ಚರ್ಮದ ಚಪ್ಪಲಿ ಮಾಡೋ ವ್ಯಾಪಾರಿಗಳು ಇದ್ರು ಅಂತ ದೊಡ್ಡವರೆಲ್ಲ ಮಾತಾಡ್ಕೋತಾ ಇದ್ರು. ನನಗಂತು, ಅದುವರೆಗೂ ಚರ್ಮದಲ್ಲಿ ಚಪ್ಪಲಿ ಮಾಡ್ತಾರೆ ಅಂತಾನೆ ಗೊತ್ತಿರಲಿಲ್ಲ. ನಾವೆಲ್ಲಾ ಚಪ್ಪಲಿ ಶಾಪಿಂಗ್ ಗೆ ಅಂತ ಹೊರಟ್ವಿ. ಬರೀ ಹವಾಯ್ ಚಪ್ಪಲಿ ನೋಡಿದವಳಿಗೆ, ಅಲ್ಲಿ ಮೂರು

ನಾಲಕ್ಕು ಡಿಸೈನ್ ಚಪ್ಪಲಿಗಳನ್ನು ನೋಡಿ ಆನಂದವೋ ಆನಂದ. ಅಮ್ಮ ನಂಗೆ 'ಕಟ್ಟೋ ಚಪ್ಪಲಿ' ಕೊಡಿಸ್ತೀನಿ ಅಂದಾಗ ಸ್ವರ್ಗಕ್ಕೆ ಮೂರೇ ಗೇಣು! ಅಮ್ಮ ತುಂಬಾ ಮುಂದಾಲೋಚನೆ ಇಂದ ಸ್ವಲ್ಪ ದೊಡ್ಡ ಚಪ್ಪಲೀನೇ ಕೊಡ್ಸಿದ್ರು. ನನ್ ಮಗಳು ಬೇಗ ಬೆಳೆದು ಬಿಡ್ತಾಳೆ. ದುಬಾರಿ ಚಪ್ಪಲಿ, ಜಾಸ್ತಿ ದಿನ ಹಾಕಲಿ ಅಂತ. ಆಗ ನಾನು ಆರನೇ ಕ್ಲಾಸ್ ಅಲ್ಲಿ ಇದ್ದೆ. ತುಂಬಾ ಖುಷಿ ಇಂದ ಚಪ್ಪಲಿ ತೊಗೊಂಡು ಊರಿಗೆ ಬಂದ್ವಿ. ನಾನು ಯಾವಾಗ ಆ ಚಪ್ಪಲಿ ಹಾಕೊತೀನೋ ಅಂತ ಕಾಯ್ತಾ ಇದ್ದೆ. ಆರನೇ ತರಗತಿ ಮುಗಿಸಿ ರಜೆ ಬಂತು. ಸುಮಾರು ಆರು ತಿಂಗಳು ಆಗಿದೆ, ನಾನು ಬೆಳೆದಿರ್ತೀನಿ ಅಂತ ಕಟ್ಟೋ ಚಪ್ಪಲಿ ತೆಗೆದು ಹಾಕಿಕೊಂಡೆ. ಅದು ಇನ್ನೂ ನನ್ನ ಪಾದಕ್ಕಿಂತ ದೊಡ್ಡದೇ ಇತ್ತು. ಹಾಗು ಹೀಗೂ ಎರಡು ವಾರ ಸುಮ್ಮನೆ ಇದ್ದೆ. ಆಸೆ ತಡೀಲಾಗದೆ, ನಡೆಯಕ್ಕೆ ಕಷ್ಟ ಆದರು ಸ್ವಲ್ಪ ಜಾಸ್ತಿನೇ ದೊಡ್ಡದಿದ್ದ ಚಪ್ಪಲಿ ಹಾಕೊಂಡು ಅಲ್ಲಿ ಇಲ್ಲಿ ನೆವ ಮಾಡ್ಕೊಂಡು ತಿರುಗತೊಡಗಿದೆ. ಒಂದಿನ ಯಾರೋ ಇಬ್ಬರು ಹುಡುಗರು ನಾನು ದೊಡ್ಡ ಚಪ್ಪಲಿ ಹಾಕಿದ್ದರೆ ಬಗ್ಗೆ ಚುಡಾಯಿಸಿ ಬಿಟ್ಟರು. ನನಗೆ ಅವಮಾನ ಆಗಿ, ಚಪ್ಪಲಿನ ತೆಗೆದಿಟ್ಟೆ. ನಾನು ಬೆಳೆದ ಮೇಲೆ ಹಾಕೊಳ್ಳನ ಬಿಡು ಅನ್ಕೊಂಡೆ. ನನ್ನ ಏಳನೇ ತರಗತಿ ಆಯಿತು, ಎಂಟನೇ ತರಗತಿಗೆ ಬಂದೆ, ಒಂಬತ್ತಕ್ಕೂ ಬಂದಾಯಿತು. ನನ್ನ ಪಾದ ಮಾತ್ರ ಬೆಳೀಲೇ ಇಲ್ಲ. ಪ್ರತಿ ಬೇಸಿಗೆ ರಜೆಯಲ್ಲಿ ಚಪ್ಪಲಿ ತೆಗೆಯದು, ಹಾಕೊಂಡು ನೋಡಿ ಬೇಜಾರಿಂದ ವಾಪಸ್ಸು ಎತ್ತಿಡದು. ಕೊನೆಗೆ ಹತ್ತನೇ ತರಗತಿಯಲ್ಲಿ ಆ ಚಪ್ಪಲಿ ಆಸೆ ಬಿಟ್ಟು, ಅದನ್ನ ಯಾರಿಗೋ ಕೊಟ್ಟುಬಿಟ್ಟೆ. ಹೀಗೆ ನನ್ನ 'ಲವ್ ಫಾರ್ ಫಸ್ಟ್ ಡಿಸೈನರ್ ಚಪ್ಪಲಿ' ಕಥೆ ದುಃಖಾಂತ್ಯವಾಯಿತು.

ಒಂದಷ್ಟು ವರ್ಷ, ನಾನು ಸಂಸ್ಕೃತ ಪಾಠಕ್ಕೆ ಹೋಗ್ತಾ ಇದ್ದೆ. ನದಿ ತೀರದ ದೇವಸ್ಥಾನದಲ್ಲಿ ಪಾಠ ಮಾಡ್ತಾ ಇದ್ರು. ಬೇಸಿಗೆ ಹಾಗು ದಸರಾ ರಜಾದಲ್ಲೂ ಪಾಠ ಇರ್ತ ಇತ್ತು. ಆಗ ನಾನು ಮೂರನೇ ತರಗತಿಯಲ್ಲಿದ್ದೆ. ಹೀಗೆ ಒಂದು ರಜೆಯಲ್ಲಿ ನನ್ನ ಕಸಿನ್ಸ್ ಬಂದಿದ್ರು. ಆಗ ನಂಗೆ ಸಂಸ್ಕೃತ ಪಾಠ ಇತ್ತು. ಅವರು ನದಿ ನೋಡಿದ ಹಾಗೆ ಆಗತ್ತೆ ಅಂತ ನನ್ನ ಜೊತೆ ದೇವಸ್ಥಾನಕ್ಕೆ ಬಂದರು. ನದಿಗೆ ದೇವಸ್ಥಾನದ ಅಂಗಳದಿಂದ ಹೋಗಬೇಕಿತ್ತು. ಹಾಗಾಗಿ ನಾವೆಲ್ಲ ದೇವಸ್ಥಾನದ ಹೊರಗೆ ಚಪ್ಪಲಿ ಬಿಟ್ವಿ. ಅವರು ನದಿಯಲ್ಲಿ ಸ್ವಲ್ಪ ಆಡಿ ಮನೆಗೆ ಹೋಗ್ತೀವಿ ಅಂದ್ರು. ನಾನು ಪಾಠಕ್ಕೆ ಹೋದೆ. ಪಾಠ ಮುಗಿಸಿ ದೇವಸ್ಥಾನದ ಹೊರಗೆ ಬಂದ್ರೆ ನನ್ನ ಚಪ್ಪಲಿ ಕಾಣ್ತಾ ಇಲ್ಲ. ಆರು ತಿಂಗಳಲ್ಲಿ ಒಂದು ದಿನಾನೂ ಚಪ್ಪಲಿ ಕಳೆದಿರಲಿಲ್ಲ. ನನಗೆ ಸಿಟ್ಟು, ಅಳು ಒಟ್ಟಿಗೆ ಬಂತು. ನನ್ನ ಕಸಿನ್ಸ್ ಮೇಲೆ ಅನುಮಾನ. ಇವರೇನಾದ್ರೂ ನನ್ನ ರೇಗಿಸಕ್ಕೆ ಚಪ್ಪಲಿ ತೊಗೊಂಡು ಹೋದರ ಅಂತ. ಆದರೆ, ಅವರಿಬ್ಬರೂ ಚಪ್ಪಲಿ ಹಾಕಿಕೊಂಡು ಬಂದಿದ್ರು. ಹೇಗೆ ಹಿಡ್ಕೊಂಡು ಹೋಗಕ್ಕೆ ಆಗತ್ತೆ? ಚಪ್ಪಲಿ ಕಳೆದೆ ಹೋಯಿತೇನೋ ಅಂತ ಅಳುಮೋರೆ ಹಾಕಿಕೊಂಡು ಬರಿ ಕಾಲಲ್ಲಿ ನಡೆಕೊಂಡು ಮನೆಗೆ ಬಂದೆ. ಬರ್ತಿದ್ದ ಹಾಗೆ ನನ್ನ ಕಸಿನ್ಸ್ ನ, 'ನನ್ನ ಚಪ್ಪಲಿ ನೀವು ತಂದ್ರ?' ಅಂತ ಕೇಳಿದೆ. ಅವರಿಬ್ಬರೂ, 'ಇಲ್ವಲ್ಲ, ಏನಾಯಿತು?' ಅಂದ್ರು. ನಾನು ಅಮ್ಮನ ಹತ್ರ ಓಡಿ. 'ಅಮ್ಮ ದೇವಸ್ಥಾನದಲ್ಲಿ ನನ್ನ ಚಪ್ಪಲಿ ಕಳೆದು ಹೋಯಿತು' ಅಂತ ಸಪ್ಪೆ ಮೊರೆ ಹಾಕಿ ಹೇಳಿದೆ. ಅಮ್ಮ ಏನಾದ್ರು ಹೇಳಕ್ಕೆ ಮುಂಚೆ ಇವರಿಬ್ಬರೂ ಜೋರಾಗಿ ನಗಕ್ಕೆ ಶುರು ಮಾಡಿದ್ರು. ನೋಡಿದ್ರೆ ಇಬ್ಬರು ನನ್ನ ಚಪ್ಪಲಿ ನ ಫುಟ್ಬಾಲ್ ಆಡ್ಕೊಂಡು ಬಂದಿದ್ದಾರಂತೆ! ನಂಗೆ ಒಂದು ಕಡೆ ಅವರ ಮೇಲೆ ಸಿಟ್ಟು, ಇನ್ನು ಒಂದ್ಕಡೆ ಚಪ್ಪಲಿ ಕಳೆದಿಲ್ಲ ಅಂತ ಸಮಾಧಾನ. ಇಬ್ಬರಿಗೂ ಎರಡೇಟು ಗುದ್ದಿ ನನ್ನ

ಚಪ್ಪಲಿ ನೋಡಕ್ಕೆ ಹೋದೆ.

ಇದು ನನ್ನ ಚಪ್ಪಲಿ ಕಥೆ ಆದ್ರೆ ನಮ್ಮ ಅಮ್ಮಂದು ಬೇರೇನೆ. ಅಮ್ಮನಿಗೆ ಅಂಗಾಲು ಚರ್ಮದ ತೊಂದರೆ ಇರೋದ್ರಿಂದ ಚಪ್ಪಲಿ ಹಾಕೆ ಇರಬೇಕು. ಮನೆ ಹೊರಗೂ, ಒಳಗೂ ಕೂಡ. ಹೀಗಾಗಿ ಅಮ್ಮ ಯಾರದ್ದಾದ್ರು ಮನೇಲಿ ಉಳಕೊಬೇಕು ಅಥವಾ ಮನೆಯಲ್ಲಿ ಸಮಾರಂಭಕ್ಕೆ ಹೋಗಬೇಕು ಅಂದ್ರೆ ಹಿಂದು ಮುಂದು ನೋಡ್ತಾರೆ. ಚಪ್ಪಲಿ ಹಾಕದಿದ್ದರೆ, ಅವರ ಅಂಗಾಲಿನ ಸಮಸ್ಯೆ ಜಾಸ್ತಿ ಆಗತ್ತೆ ಅಂತ. ಹೀಗೆ ಒಂದುಸಲ ನಮ್ಮಮ್ಮನ ಕಸಿನ್ ಮಗನ ಮದ್ವೆಗೆ ಹೋಗಿದ್ವಿ. ಈಗೆಲ್ಲ ಮದುವೆ ಮನೆಗೆ ಚಪ್ಪಲಿ ಹಾಕಿಕೊಂಡು ಹೋಗಬಹುದಲ್ಲ. ಹಾಗಾಗಿ ಅಮ್ಮ ಖುಷಿಯಾಗಿ ರೆಡಿ ಆಗಿ ಬಂದಿದ್ರು. ಯಾವುದೊ ಶಾಸ್ತ್ರಕ್ಕೆ ಅಮ್ಮನ್ನ ಮಂಟಪಕ್ಕೆ ಕರೆದರು. ಅಮ್ಮ ಚಪ್ಪಲಿ ಮಂಟಪದ ಹೊರಗೆ ಬಿಟ್ಟು, ಶಾಸ್ತ್ರ ಮುಗಿಸಿ ಬಂದರು. ನಾನು ದೂರ ಕೂತು ಎಲ್ಲ ನೋಡ್ತಾ ಇದ್ದೆ. ಯಾಕೋ ಅಮ್ಮ ಆ ಕಡೆ ಇಂದ ಈ ಕಡೆ, ಈ ಕಡೆ ಇಂದ ಆ ಕಡೆ ಓಡಾಡ್ತಾ ಏನೋ ಹುಡುಕ್ತಾ ಇರೋ ತರ ಅನ್ನಿಸ್ತು. ಏನಾಯಿತಪ್ಪ ಅಂತ ಅವರ ಹತ್ರ ಹೋದೆ. 'ನೋಡೇ, ನನ್ನ ಚಪ್ಪಲಿ ಯಾರೋ ಕದ್ದು ಬಿಟ್ಟಿದ್ದಾರೆ', ಅಂದ್ರು. ನಂಗೆ ನಗು. ಆ ಮದುವೇಲಿ ಎಲ್ಲ ದೊಡ್ಡ ಜನ ಬಂದಿದ್ರು. ಸ್ಟೈಲ್ ಆಗಿ ಅಲಂಕಾರ ಮಾಡ್ಕೊಂಡು ಬಂದಿದ್ರು. ನಮ್ಮ ಅಮ್ಮನದೋ ಎಂ.ಸಿ.ಆರ್. ಚಪ್ಪಲಿ. ಹವಾಯ್ ಚಪ್ಪಲಿ ಅಣ್ಣನೋ ತಮ್ಮನೋ ಅನ್ನೋ ತರ ಇತ್ತು ಅವರ ಚಪ್ಪಲಿ. ಇದನ್ನ ಈ ಮದುವೆ ಮನೇಲಿ ಯಾರು ಕದೀತಾರೆ? ಈ ಚಪ್ಪಲಿಗಿಂತ, ತುಂಬಾ ಚೆನ್ನಾಗಿರೋ, ಹೆಚ್ಚು ಬೆಲೆ ಬಾಳೋ ಚಪ್ಪಲಿಗಳೆಲ್ಲ ಇದೆ. ಇದೆಲ್ಲ ಅಮ್ಮಂಗೆ ವಿವರಿಸಕ್ಕೆ ಆಗಲ್ಲ ಅನ್ಕೊಂಡು,

"ಅಮ್ಮ, ಯಾವ ಚಪ್ಪಲಿ ಹಾಕಿಕೊಂಡು ಬಂದಿದ್ರಿ? ಕಪ್ಪುದೊ? ಕಂದು ಬಣ್ಣದ್ದೋ?'.

'ಹೊರಗೆ ಹಾಕೋಳದು ಕಪ್ಪುದಲ್ವೇನೇ, ಅದನ್ನೇ ಹಾಕಿಕೊಂಡು ಬಂದಿದ್ದೆ'.

"ಸ್ವಲ್ಪ ಇರಿ, ಸದ್ಯಕ್ಕೆ ನನ್ನ ಚಪ್ಪಲಿ ಹಾಕೊಳಿ, ನಾನು ಹುಡುಕಿ ಕೊಡ್ತೀನಿ" ಅಂತ ಒಂದು ಕಡೆ ಕೂರಿಸಿದೆ. ಮಂಟಪದ ಹತ್ರ ಬಂದು ನೋಡಿದೆ. ಎಲ್ಲ ಹೈ ಹೀಲ್ಡ್ ಚಪ್ಪಲಿ, ಲಿಬರ್ಟಿ, ಬಾಟಗಳೇ ಕಾಣಿಸ್ತಾ ಇತ್ತು. ಒಂದು ಕಪ್ಪು ಬಣ್ಣದ ಚಪ್ಪಲಿ ಮೂಲೇಲಿ ಕಾಣಿಸ್ತು. ಅಬ್ಬಾ ಸಿಕ್ತು ಅಂತ ಹೋದೆ. ಒಂದೇ ಇತ್ತು. ಇನ್ನೊಂದು ಕಾಣಿಸ್ಲಿಲ್ಲ. ಆ ಚಪ್ಪಲಿನ ತೊಗೊಂಡು ಹೋಗಿ ಅಮ್ಮನ ಮುಂದೆ ಇಟ್ಟು, "ಇದೇನಾ?" ಅಂದೆ. "ಹೂ ಕಣೆ, ಎಲ್ಲಿತ್ತು?" ಒಳ್ಳೆ ನಿಧಿ ಸಿಕ್ಕಿದವರ ಹಾಗೆ ಖುಷಿ ಇಂದ ಕೇಳಿದ್ರು.

"ಸ್ವಲ್ಪ ಇರೀಮಾ. ಒಂದೇ ಸಿಕ್ಕಿದ್ದು. ಇನ್ನೊಂದು ಹುಡುಕ್ತೀನಿ", ಅಂತ ನಗು ತಡಕೊಂಡು ಹೇಳಿದೆ. "ಒಂದೇ ಸಿಕ್ಕಿರದ? ಇನ್ನೊಂದು ಯಾರಾದ್ರೂ ಹಾಕೊಂಡು ಹೋಗ್ಬಿಟ್ಟಿದಾರೆನೋ" ನಾನು ಅಮ್ಮನ್ನೇ ದುರುಗುಟ್ಟಿ ನೋಡಿದೆ. ಅಮ್ಮ ಸುಮ್ಮನಾದರು.

ಊಟದ ಸಮಯಕ್ಕೆ ಮಂಟಪದ ಮುಂದೆ ಚಪ್ಪಲಿ ಸಂಖ್ಯೆ ಕಮ್ಮಿ ಆಗಿತ್ತು. ಅಲ್ಲಿ ಒಂದು ಕಂದು ಬಣ್ಣದ ಎಂ.ಸಿ.ಆರ್ ಚಪ್ಪಲಿ ಕಾಣಿಸ್ತು. ಅದರ ಜೊತೆ ಎಲ್ಲೂ ಕಾಣಿಸ್ಲಿಲ್ಲ. ಅಮ್ಮನ್ನ ಕರೆದು ತೋರಿಸಿದೆ. "ಅಯ್ಯೋ, ಯಾರೋ ನನ್ ತರ ಎಂ.ಸಿ.ಆರ್ ಚಪ್ಪಲಿ ಹಾಕಿಕೊಂಡು ಬಂದಿದ್ರು ಅನ್ಸತ್ತೆ. ಗಡಿಬಿಡಿಲಿ ನನ್ನದೊಂದು ಅವರದ್ದೊಂದು ಚಪ್ಪಲಿ ಹಾಕೊಂಡು ಹೋಗ್ಬಿಟ್ಟಿದಾರೆ" ಅಂತ ನಕ್ಕೋತ ಅಕ್ಕಪಕ್ಕದವರ ಹತ್ರ ಎಲ್ಲ ಹೇಳಿ, ಸ್ವಲ್ಪ ಸಮಾಧಾನ ಮಾಡ್ಕೊಂಡ್ರು.

ನಾನು "ಸದ್ಯಕ್ಕೆ ಇದನ್ನ ಹಾಕೊಳಿ. ಮನೆಗೆ ಹೋದಮೇಲೆ ಬೇರೆ ಚಪ್ಪಲಿ ಆರ್ಡರ್ ಮಾಡ್ತೀನಿ "ಅಂದೆ.

ಊಟ ಎಲ್ಲ ಮುಗಿಸಿ, ನಾವು ಮನೆ ಕಡೆ ಹೊರಟ್ವಿ. ಅಮ್ಮ "ಹೊಸ ಚಪ್ಪಲಿ ಕಣೆ, ಬೇಜಾರಾಗ್ತಾ ಇದೆ. ಯಾವಾಗ್ಲೂ ಹೀಗೆ ಆಗತ್ತೆ. ಹೊಸ ಚಪ್ಪಲಿ ತೊಗೊಂಡಾಗಲೆಲ್ಲ ಕಳೆದು ಹೋಗತ್ತೆ. ಇನ್ಮೇಲೆ ಮದುವೆ, ಮುಂಜಿ, ದೇವಸ್ಥಾನ ಅಂತ ಹೋಗಬೇಕಾದ್ರೆ, ಹಳೆ ಚಪ್ಪಲಿ ಹಾಕೊಂಡು ಬರಬೇಕು. ಎಷ್ಟು ದುಡ್ಡು ದಂಡ. ಅನ್ಯಾಯ!" ಅಂತೆಲ್ಲ ದಾರಿ ಉದ್ದಕ್ಕೂ ಪರಿತಪಿಸುತ್ತ ಬಂದ್ರು. ನಾನು ಕಾರ್ ನಿಲ್ಸಿ, ಮನೆ ಹತ್ರ ಬರೋ ಅಷ್ಟೊತ್ತಿಗೆ ಅಮ್ಮನ ಸ್ನೇಹಿತೆ ಸಿಕ್ರು. ನಾನು, ಅಪ್ಪ ಮುಂದೆ ಬಂದ್ವಿ. ಅಪ್ಪ ಬಾಗಿಲು ತೆಗೀತಿದ್ದಾಗ, ನಾನು ಚಪ್ಪಲಿ ಬಿಡಕ್ಕೆ ಹೋದರೆ ,ಅಲ್ಲಿ ಅಮ್ಮ ಹೊರಗಡೆ ಹಾಕ್ಕೊಂಡು ಹೋಗೋ ಕಪ್ಪು ಚಪ್ಪಲಿ ಒಂದು, ಮನೇಲಿ ಹಾಕೊಳೋ ಕಂದು ಚಪ್ಪಲಿ ಒಂದು ನನ್ನನ್ನ ಸ್ವಾಗತಿಸ್ತು. ನಾನು ಅಮ್ಮ ಬಂದ್ರ ಅಂತ ತಿರುಗಿ ನೋಡೋ ಅಷ್ಟರಲ್ಲಿ ಅಮ್ಮ ನನ್ನ ಪಕ್ಕ ಪೆಚ್ಚು ಮೋರೆ ಹಾಕಿ ನಿಂತಿದ್ರು. ನಂಗೆ ಜೋರು ನಗು.

"ಥೂ, ನಾನು ಎಂತ ಪೆದ್ದ ಕೆಲಸ ಮಾಡಿದೀನೇ. ಅದೊಂದು ಇದೊಂದು ಚಪ್ಪಲಿ ಹಾಕೊಂಡು ಬಂದು ಬಿಟ್ಟಿದೀನಿ" ಅಂತ ನಾಚಿಕೆ ಇಂದ ಹೇಳಿದ್ರು. ನಾನು ನಗ್ತಾ, "ಹೋಗಲಿ ಬಿಡಮ್ಮ. ನಾನು ಮಾಡಿರ್ಲಿಲ್ವ. ಮಣಿಪಾಲ ಹಾಸ್ಪಿಟಲಲ್ಲಿ ಅಡ್ಮಿಟ್ ಆಗಿದ್ದ ಮನುನ ನೋಡಕ್ಕೆ ಬೇರೆ ಬೇರೆ ಚಪ್ಪಲಿ ಹಾಕೊಂಡು ಹೋಗ್ಬಿಟ್ಟಿದ್ದೆ. ಆಸ್ಪತ್ರೆ ಪೂರ್ತಿ ಸೈಡ್ ಗೆ ತಿರ್ಕೊಂಡು ಓಡಾಡಿದ್ದೆ. ಎಲ್ಲಿ ಯಾರಾದ್ರೂ ನೋಡ್ ಆಡ್ಕೊತಾರೊ ಅಂತ!" ಅಂತ ಹೇಳಿ ಸಮಾಧಾನ ಮಾಡಿ, ಒಳಗೆ ಕರ್ಕೊಂಡು ಹೋದೆ. ಅಪ್ಪ ಇದನ್ನ ಕೇಳಿ ಹಿ ಹಿ ಹಿ ಅಂತ ನಕ್ಕು, ಸ್ವಲ್ಪ ಅಮ್ಮನ್ನ ರೇಗಿಸಿದ್ರು.

ಅದಾದ ಮೇಲೆ ಅಮ್ಮ ಎಚ್ಚೆತ್ತುಕೊಂಡರು. ಎಲ್ಲಾದ್ರೂ ಹೊರಗೆ ಹೋಗಬೇಕಾದಾಗ, ಮನೆ ಒಳಗೆ ಹಾಕೊ ಚಪ್ಪಲಿನ ಒಳಗೇ ಬಿಟ್ಟು, ಹೊರಗೆ ಬಂದು ಹೊರಗಿನ ಚಪ್ಪಲಿ ಹಾಕೊಳ ಅಭ್ಯಾಸ ಮಾಡ್ಕೊಂಡ್ರು. ಸುಮಾರು ಎಲ್ಲ ಅಪಾರ್ಟ್ಮೆಂಟ್ ಅಲ್ಲಿ ಚಪ್ಪಲಿ ಸ್ಟಾಂಡ್ ಹೊರಗೆಇಟ್ಟಿರ್ತಾರೆ. ನಮ್ಮ ಅಪಾರ್ಟ್ಮೆಂಟ್ ಅಲ್ಲೂ ಸುಮಾರು ಜನ ಹಾಗೆ. ಒಂದು ದಿನ ಬೆಳಗ್ಗೆ ಏಳ್ತಿದ್ದ ಹಾಗೆ, ನಮ್ಮ ಅಪಾರ್ಟ್ಮೆಂಟ್ ವಾಟ್ಸಪ್ಪ್ ಗ್ರೂಪ್ ಅಲ್ಲಿ ಸುಮಾರು ಮೆಸೇಜಸ್ ಬಂದಿತ್ತು. ವಿಷಯ ಏನಂದ್ರೆ ಸುಮಾರು ಮನೇಲಿ ಶೂಗಳು ಕಳುವಾಗಿವೆ. ಈಗೆಲ್ಲ ಕಾರ್ಯಕ್ರಮಕ್ಕೆ ತಕ್ಕಂತೆ, ಕಾರ್ಯಕ್ಕೆ ತಕ್ಕಂತೆ ಪಾದರಕ್ಷೆ ಹಾಕಿಕೋತಾರಲ್ಲ. ಮದುವೆಗೆ ಅಂದ್ರೆ ಒಂದು ತರ ಚಪ್ಪಲಿ, ರಿಸೆಪ್ಶನ್ ಗೆ ಬೇರೆ ತರ. ಓಡಕ್ಕೊಂದು, ನಡೆಯಕ್ಕೊಂದು, ಹೀಗೆ. ತುಂಬಾ ಚಪ್ಪಲಿಗಳನ್ನ ಹೊರಗೆ ಬಿಟ್ಟಿದ್ದವರ ಮನೆಗಳಲ್ಲಿ, ಕಳ್ಳ ಚೆನ್ನಾಗಿ ಚಪ್ಪಲಿ ಕಳ್ಳತನ ಮಾಡಿದ್ದ ಅಂತ ಕಾಣುತ್ತೆ. ಜನ ಸಿಟ್ಟಿನಿಂದ, ದುಃಖದಿಂದ ಮೆಸೇಜಸ್ ಹಾಕಿದ್ರು. 'ನಂದು 3 ಜೊತೆ ಕಳುವಾಗಿದೆ, ಒಟ್ಟು ಐದೂವರೆ ಸಾವಿರ' ಅಂತ ಒಬ್ಬರು ಅಂದ್ರೆ ಇನ್ನೊಬ್ಬರು, 'ನಮ್ಮ ಮನೇಲಿ ನಾಕು ಜನದ್ದು ಹೋಗಿದೆ, ಒಟ್ಟು ಹತ್ತು ಸಾವಿರ' ಅಂತ. ನಾನು ಅಮ್ಮಂಗೆ ಕರೆದು "ನೋಡಮ್ಮ ಎಲ್ಲರ ಮನೆ ಚಪ್ಪಲಿ ಕಳುವಾಗಿದೆಯಂತೆ. ಮೆಸೇಜ್ ಮಾಡಿದಾರೆ" ಅಂದೆ. ಅಮ್ಮ ಗಾಬರಿ ಇಂದ ಬೀದಿಗೆ ಓಡಿದ್ರು, ನಮ್ಮ ಮನೆ ಚಪ್ಪಲಿ ಕಳುವಾಗಿದ್ಯಾ ಅಂತ ನೋಡಕ್ಕೆ. ನಮ್ಮ ಮೂರು ಜೊತೆ ಚಪ್ಪಲಿ ಅಲ್ಲೇ ಸೇಫ್ ಆಗಿ ಕೂತಿತ್ತು. ನಮ್ಮ ಅಪ್ಪಂಗೆ ಡೈಯಾಬಿಟೀಸ್ ಅಂತ ಎಂ.ಸಿ.ಆರ್. ಚಪ್ಪಲಿ, ಅಮ್ಮ ಚರ್ಮದ ತೊಂದರೆ ಅಂತ ಎಂ.ಸಿ.ಆರ್.

ಚಪ್ಪಲಿ, ಆಗ ನಂಗೆ ಕಾಲು ಫ್ರಾಕ್ಚರ್ ಆಗಿದ್ದ ಹೊಸದಾದರಿಂದ ನಂದು ಎಂ.ಸಿ.ಆರ್. ಚಪ್ಪಲಿ. ಕಳ್ಳ ಇವನ್ನ ಕದ್ದರೆ ಅವನಿಗೆ ಓವರ್‌ಹೆಡ್ ಅಂತ ಬಿಟ್ಟು ಹೋಗಿದ್ದ ಅಂತ ಕಾಣುತ್ತೆ. ನಮ್ಮ ಚಪ್ಪಲಿ ಕಳುವಾಗಿಲ್ಲ ಅನ್ಕೊಂಡು ನಾವು ಖುಷಿ ಇಂದ "ಚಪ್ಪಲಿ ಕಳ್ಳ ನಮ್ಮ ಚಪ್ಪಲಿಗಳನ್ನ ನೋಡಿ, ಪಾಪ ಅನ್ನಿಸಿ ಅವನೇ ಬೇರೆ ಚಪ್ಪಲಿ ಇಟ್ಟು ಹೋಗಬೇಕಾಗಿತ್ತೇನೋ" ಅಂತ ತಮಾಷೆ ಮಾಡ್ಕೊಂಡು ಸುಮ್ನೆ ಆದ್ವಿ. ನಮ್ಮ ಪಾದದ ರಕ್ಷಣೆಗೆ ಅಂತ ಇರೊ ಪಾದರಕ್ಷೆಗೇ ರಕ್ಷಣೆ ಕೊಡೊ ಗತಿ ಬಂದಿತ್ತು.

ಇನ್ನು ನಮ್ಮ ಅಪ್ಪನ ಕಥೆಗೆ ಬರೋಣ. ನಮ್ಮ ಮನೇಲಿ ಹೊಸ ಚಪ್ಪಲಿ ತೊಗೋಬೇಕು ಅಂದ್ರೆ ನಂಗೆ ತಲೆ ಬಿಸಿ. ನಮ್ಮ ಮೂರು ಜನರ ಪಾದದ ಸೈಜ್ ಗೆ ಚಪ್ಪಲಿ ಸಿಗೋದೇ ಕಷ್ಟ. ಆ ಸಲ ಹೇಗೋ ಸರ್ಕಸ್ ಮಾಡಿ, ನಮ್ಮ ಅಪ್ಪಂಗೆ ಹೊಸ ಚಪ್ಪಲಿ ಹುಡುಕಿ ತಂದಿದ್ದೆ. ತಂದ 3 ದಿನಕ್ಕೆ, ನಾನು ಸಂಜೆ ವಾಕಿಂಗ್ ಮುಗಿಸಿ ಮನೆಗೆ ಬಂದ ಮೇಲೆ "ಅಪ್ಪನ ಹೊಸ ಚಪ್ಪಲಿ ಕಳೆದಿದೆಯಂತೆ. ಅಪ್ಪ ಹೇಳಿದ್ರು" ಅಮ್ಮ ಅಂದ್ರು. ನಾನು, ಒಳ್ಳೆ ಕಥೆ ಆಯಿತಲ್ಲ, ಮತ್ತೆ ಇವರ ಸೈಜ್ ಚಪ್ಪಲಿ ಎಲ್ಲಿಂದ ತರೋದು ಅಂತ ಚಿಂತೆ ಮಾಡ್ತಾ ಕೇಳಿದೆ, "ಎಲ್ಲಿ ಕಳೀತಂತೆ?". ನನ್ನ ಅನುಭವದಲ್ಲಿ ಒಂದೆರಡು ಸಲ ಎಲ್ಲಿ ನನ್ನ ಚಪ್ಪಲಿ ಕಳೆದಿತ್ತೋ, ಅಲ್ಲಿ 2–3 ದಿನ ಆದಮೇಲೆ ನನ್ನ ಚಪ್ಪಲಿ ಸಿಕ್ಕಿತ್ತು. ಆ ತರ ಚಪ್ಪಲಿ ಸಿಗಬಹುದೇನೋ ಅನ್ಕೋ ಆಸೆಯಿಂದ ಕೇಳಿದೆ. ಅದಕ್ಕೆ ಅಮ್ಮ "ಇಲ್ಲೇ ಮನೆ ಮುಂದೆ. ವಾಕಿಂಗ್ ಮುಗಿಸಿ ಚಪ್ಪಲಿ ಹೊರಗೆ ಬಿಟ್ಟು ಬಂದಿದಾರೆ. ಮತ್ತೆ ಹೊರಗೆ ಹೋಗಕ್ಕೆ ನೋಡಿದ್ರೆ ಚಪ್ಪಲಿ ಇಲ್ಲ. ಯಾರು ಕದ್ಕೊಂಡು ಹೋದ್ರೋ ಏನೋ".

ಒಳ್ಳೆ ಕಥೆ ಆಯಿತಲ್ಲ. ರಾತ್ರಿ ಅಥವಾ ಬೆಳಗಿನಜಾವ ಆದ್ರೆ ಯಾರೋ ಕದ್ದಿರಬಹುದು ಅನ್ನಬಹುದು. ಇದು ಯಾರು, ಹಗಲೇ ಚಪ್ಪಲಿ ಕದಿಯೋ ಡೇರ್ ಡೆವಿಲ್ ಕಳ್ಳ ಅನ್ಕೊಂಡೆ. ನಾನು ಬೇರೆ ಕೆಲಸದ ಪ್ರಯುಕ್ತ ಹೊರಗೆ ಹೋಗಿ ರಾತ್ರಿ ಬಂದೆ. ಅಪ್ಪನ ಚಪ್ಪಲಿ ಬಾಗಿಲಲ್ಲಿ ಕೂತಿದೆ. ಒಳಗೆ ಬಂದು, ಎಲ್ಲಿತ್ತು ಚಪ್ಪಲಿ ಅಂತ ಕೇಳಿದೆ. ಅಪ್ಪ ನಗ್ತಾ ಹೇಳಿದ್ರು. ಅವರು ವಾಕಿಂಗ್ ಮುಗಿಸಿ, ನಮ್ಮ ಬ್ಲಾಕ್ ಲಿಫ್ಟ್ ಹತ್ತಿದಾರಂತೆ. ಲಿಫ್ಟ್ ಅಲ್ಲಿ ಒಬ್ಬರೇ ಇದ್ರಂತೆ. ಫ್ಲೋರ್ ಬಂದ ತಕ್ಷಣ ಲಿಫ್ಟ್ ಓಪನ್ ಆಗಿದೆ. ಇವರು ಮನೆಗೆ ಬಂದು ಚಪ್ಪಲಿ ಬಿಟ್ಟು, ಮನೆ ಬೀಗ ಓಪನ್ ಮಾಡಕ್ಕೆ ಟ್ರೈ ಮಾಡಿದಾರೆ. ಬೀಗ ಓಪನ್ ಆಗ್ತಾ ಇಲ್ಲ. ಎರಡು ಮೂರು ಸಲ ಟ್ರೈ ಮಾಡೋ ಹೊತ್ತಿಗೆ ಪಕ್ಕದ ಮನೆಯವರು ಬಾಗಿಲು ತೆಗೆದು "ಯಾರು ನೀವು?" ಅಂದಿದಾರೆ. ಆಗ ಅಪ್ಪಂಗೆ ಗೊತ್ತಾಗಿದೆ, ಅವರು ನಮ್ಮ ಫ್ಲೋರ್ ಬರೋ ಮುಂಚೆನೇ ಲಿಫ್ಟ್ ಬಾಗಿಲು ತೆಗೀತು ಅಂತ ನಮ್ಮ ಫ್ಲೋರ್ ಅನ್ಕೊಂಡು ಬೇರೆ ಫ್ಲೋರ್ ಗೆ ಹೋಗಿಬಿಟ್ಟಿದಾರೆ. ಎಲ್ಲ ಫ್ಲೋರ್ ಅಲ್ಲು ಒಂದೇ ತರ ಮನೆಗಳು. ಇವರು ನಮ್ಮ ಮನೆ ಅನ್ಕೊಂಡು ಬೇರೆಯವರ ಮನೆ ಬೀಗ ತೆಗಯಕ್ಕೆ ಟ್ರೈ ಮಾಡಿದಾರೆ. ಪಕ್ಕದ ಮನೆಯವರನ್ನ ನೋಡಿ, ಬೇರೆ ಫ್ಲೋರ್ ಗೆ ಹೋಗಿದಾರೆ ಅಂತ ಗೊತ್ತಾಗಿದೆ. ಗಾಬರಿಯಲ್ಲಿ ಪಕ್ಕದ ಮನೆಯವರಿಗೆ, ತಪ್ಪು ಫ್ಲೋರ್ ಗೆ ಬಂದುಬಿಟ್ಟಿದೀನಿ ಸಾರೀ ಅಂದು, ಗಡಿಬಿಡಿಯಲ್ಲಿ ಚಪ್ಪಲಿ ಅಲ್ಲೇ ಬಿಟ್ಟು ಮನೆಗೆ ಬಂದಿದಾರೆ. ಆಮೇಲೆ ನೆನಪಾಗಿ, ಬೀಗ ತೆಗಯಕ್ಕೆ ಹೋಗಿದ್ ಮನೆಗೆ ಹೋಗಿ, ಚಪ್ಪಲಿ ತಂದಿದಾರೆ. ಇದನ್ನ ಕೇಳಿ ನನಗೆ ನಗು ತಡೆಯಕ್ಕೆಆಗ್ಲಿಲ್ಲ. ಮತ್ತೆ ಮತ್ತೆ ನೆನಪಾಗಿ, ನಕ್ಕು ನಕ್ಕು, ನಾನೊಬ್ಬಳೇ ಯಾಕೆ ನಗೋದು ಅಂತ, ಈ ಪ್ರಸಂಗಗಳನ್ನ ಬರೀಬೇಕಾಯಿತು.

ಸರಿ, ಬರ್ಲಾ ನಾನು? ಏನು? ಚಪ್ಪಲಿ ಜೋಪಾನ ಅಂದ್ರ? ■

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

●ದಂನಆ

● ಈ ಇಂಗ್ಲಿಷ್ ಹೊಸ ವರ್ಷ ಸರಿ ರಾತ್ರೀಲಿ ಸದ್ದಿಲ್ಲದೆ ಯಾಕೆ ಬರುತ್ತೆ?

● ಋಷಿಗಳು ಯಾರ ಪುಸ್ತಕ ಓದಿದ್ದರು?

● ವಾಸ್ತವವಾಗಿ 'ನಾಳೆ' ಎಂಬುದೇ ಇಲ್ಲ. ಏಕೆಂದರೆ 'ನಾಳೆ' ಬಂದಾಗ ಅದು ಇಂದೇ ಆಗಿರುತ್ತದೆ.

● ಯು ಕೆನ್ ಫೋರ್ಸ್ ಪೀಪಲ್ ಟು ಒಬೆ; ಬಟ್ ಯು ಕೆನಾಟ್ ಫೋರ್ಸ್ ದೆಮ್ ಟು ಅಂಡರ್‌ಸ್ಟಾಂಡ್.

● ಅಂದುಕೊ, ಆಗುವೆ. ಆಗುವದಾದರೆ ದೇವರೇ ಆಗುವೆ!

● ಎ ಹಂಗ್ರಿ ಸ್ಟಮಕ್, ಅನ್ ಎಂಪ್ಟಿ ಪಾಕೆಟ್ ಅಂಡ್ ಎ ಬ್ರೋಕನ್ ಹಾರ್ಟ್ ಕೆನ್ ಟೀಚ್ ದಿ ಬೆಸ್ಟ್ ಲೆಸನ್ಸ್ ಆಫ್ ಲೈಫ್.

● ನೀನು ಹೇಳುವದನ್ನೆಲ್ಲಾ ಯೋಚಿಸು. ಆದರೆ ಯೋಚಿಸಿದ್ದನ್ನೆಲ್ಲವನ್ನೂ ಹೇಳದಿರು.

● ನನ್ನ ಮಗಳು ಪರೀಕ್ಷೆಯಲ್ಲಿ ಶೇ 93ರಷ್ಟು ಮಾತ್ರ ಅಂಕ ಗಳಿಸಿದ್ದಾಳೆ. ನನಗೆ ನಿರಾಸೆಯಾಗಿದೆ. ಅವಳನ್ನು ಶಿಕ್ಷಿಸಬೇಕೆ?

–ನಿನ್ನಂತಹ ತಂದೆಯಿರುವುದೇ ಆಕೆಗೆ ಒಂದು ಶಿಕ್ಷೆ ಅಲ್ಲವೆ?

● ಎ ಮ್ಯಾನ್ ಈಸ್ ನಾಟ್ ಎ ಫೈಲ್ಯೂರ್ ಅಂಟಿಲ್ ಹಿ ಬಿಗಿನ್ಸ್ ಟು ಬ್ಲೇಮ್ ಸಂಬಡಿ ಎಲ್ಸ್.

● ಗೋಡೆಯೇ ಇಲ್ಲದಿದ್ದರೆ ಪೈಂಟ್ ಮಾಡುವುದು ಹೇಗೆ?

● ನಿಮ್ಮ ಡಿಗ್ರೀ ಈಸ್ ಎ ಜಸ್ಟ್ ಎ ಪೀಸ್ ಆಫ್ ಪೇಪರ್. ಯುವರ್ ಎಜುಕೇಷನ್ ಈಸ್ ಸೀನ್ ಇನ್ ಯುವರ್ ಬಿಹೇವಿಯರ್.

● ಹು ವಿ ಆರ್ ಈಸ್ ಹು ವಿ ವರ್.

● ನಿಮಗೆ ನಂತರ ಹೊಳೆಯುವುದೇ ಉತ್ತಮ ಉತ್ತರ.


● ವಯಸ್ಸಾಗುವುದು ಸಹಜ. ಮುದುಕನಾಗುವುದು ಐಚ್ಛಿಕ.

■

ಬೀಚಿ ಪ್ರಕಾಶನದ

ಜನರು ಕೇಳಿದ
ಪ್ರಶ್ನೆಗಳಿಗೆ ಬೀಚಿ
ಅವರು ಸ್ವಾರಸ್ಯವಾಗಿ
ಉತ್ತರ ನೀಡಿದ್ದಾರೆ.

ಉತ್ತರಭೂಪ
ಪ್ರಶ್ನೋತ್ತರಗಳ
ಸಂಗ್ರಹ




# ಉತ್ತರಭೂಪ

"ತಾಯಿ" ಎಂಬ ಎರಡು ಅಕ್ಷರಗಳ ಬಗ್ಗೆ ನಿಮ್ಮ ಅಭಿಪ್ರಾಯ?

"ಜಗತ್ತು" ಎಂಬ ಮೂರು ಅಕ್ಷರಗಳ ಶಬ್ದಕ್ಕಿಂತಲೂ ಇದು ಬಹಳ ದೊಡ್ಡದು.

–ಬೀchi

ಭರತನಾಟ್ಯ ಹಾಗೂ ಕ್ಯಾಬರೆ ನೃತ್ಯಗಳಲ್ಲಿ ಕಲಿಯಲು ಸುಲಭ ಯಾವುದು ಸಾರ್?

ಭರತನಾಟ್ಯ ಕಲಿಯುವುದು ಕಷ್ಟ, ಕ್ಯಾಬರೆ ನೃತ್ಯವನ್ನು ಮರೆಯುವುದು ಕಷ್ಟ.

ಬೀchi

ವಿದೇಶಿಯರಂತೆ ನಾವೂ ಸಹ ತುಟಿಗೆ ತುಟಿ ಜೋಡಿಸಿ. .....

ಈ ಮಹಾ ಕಾರ್ಯಕ್ಕೆ ವಿದೇಶಿಯರೇ ಬೇಕೇ? ಅಮ್ಮ ಅನ್ನಿ. ಈಗ ತುಟಿಗೆ ತುಟಿ ಜೋಡಣೆ ಆಗಲಿಲ್ಲವೇ?

ಬೀchi

ಬೆಲೆ : **299/-** ನಮ್ಮ ಅಪರಂಜಿ ಬಳಗಕ್ಕೆ ವಿಶೇಷವಾಗಿ
10% ರಿಯಾಯಿತಿ ಹಾಗೂ ಅಂಚೆ ಉಚಿತ.

ಆಸಕ್ತರು ಸಂಪರ್ಕಿಸಿ: **M: 9845264304**

**Phonepay, Google pay** ಜೊತೆಯಲ್ಲಿ ತಮ್ಮ ವಿಳಾಸವನ್ನು

ಈ ನಂಬರಿಗೆ ಕಳುಹಿಸಿ **9845264304**

ಇತರ ಪುಸ್ತಕಗಳ ಮಾಹಿತಿ ಪಡೆಯಲು ನಮ್ಮ ಅಂತರ್ಜಾಲ www.beechi.in

# ‘ಇರುವುದೆಲ್ಲವ ಬಿಟ್ಟು...’

**● ಲತಾ ಹೆಗಡೆ**

ಅಬ್ಬಬ್ಬಾ! ಅಂತೂ ಇಂತೂ ನೆರೆತ ಕೂದಲಿಗೆ ಐಶ್ವರ್ಯಾ ರಾಯ್ ಉಪಯೋಗಿಸೋ ಬಣ್ಣವನ್ನೇ ಬಳಿದದ್ದಾಯಿತು, ಇನ್ನು ಅವಳಂತೇ ನುಣುಪಾದ ಕಪ್ಪುಕೂದಲಿನ ಒಡತಿ ನಾನಾಗೋದ್ರಲ್ಲಿ ಸಂಶಯವೇ ಇಲ್ಲ; ಆದರಿಲ್ಲಿ ದಟ್ಟ ಪದವನ್ನು ಬಳಸಲಾರೆ. ಮತ್ಯಾಕೆ ಈ ದರ್ದು ಅಂತಿದ್ದೀರಾ? ಅಳಿದುಳಿದ ಕೇಶರಾಶಿ(?) ಕಪ್ಪಾಗಿಸುವಾಗ ಹತ್ತೇಕೆ ಇಪ್ಪತ್ತು ವರ್ಷ ಚಿಕ್ಕವಳಂತೆ ಕೋರೈಸೋ ಮಧುರ ಅನುಭೂತಿ ಅನುಭವಿಸಿದವರಿಗಷ್ಟೇ ಗೊತ್ತು. ‘ಡೈ’ ಮಾಡಿಕೊಳ್ಳುವ ಸಮಾನ ಮನಸ್ಕ ವಯಸ್ಕರೆಲ್ಲರದ್ದೂ ಕೂಡ ಇದೇ ಅಭಿಪ್ರಾಯ ಎಂದು ಅವರೆಲ್ಲರ ಪರವಾಗಿ ಭಗವದ್ಗೀತೆ ಮುಟ್ಟಿ ಪ್ರಮಾಣ ಮಾಡಿ ಹೇಳಬಲ್ಲೆ. ಹಾಗಿಲ್ಲದಿದ್ದಲ್ಲಿ ಕಳಿತ ಮುಖದವರು, ಅರ್ಧಚಂದ್ರಾಕೃತಿಯ ತಲೆಗೂದಲಿನ ಒಡೆಯರು, ಅಲ್ಲಲ್ಲಿತಲೆ ಬುರುಡೆ ಇಣುಕುವ ವಿರಳ ಕೂದಲಿನ ನನ್ನಂತಹವರು ಬಣ್ಣ ಹಚ್ಚಿಕೊಳ್ಳುವ ಗೋಜಿಗೆ ಹೋಗುತ್ತಿದ್ದರೇ? ಬಿಡಿ, ಮೂವತ್ತಕ್ಕೇ ಕೂದಲಷ್ಟೇ ಅಲ್ಲದೇ ಎಲ್ಲವೂ ಸತ್ವ ಕಳೆದುಕೊಂಡು ಕಳಾಹೀನವಾಗುವ ಕಾಲವಿದು, ಕಾರಣ ಕೇಳಬೇಡಿ... ಸ್ವಯಂಕೃತ ಅಪರಾಧ ಎನ್ನಬಹುದಷ್ಟೇ.

ಇನ್ನು ಮದುವೆ ಮಾಸ ಬಂದರಂತೂ ಮುಗಿದೇ ಹೋಯಿತು, ತಲೆಯಿಂದ ಕಾಲಿನವರೆಗೂ ಮುತುವರ್ಜಿ ವಹಿಸಲೇಬೇಕಾದಸ್ಥಿತಿ.ಈ ಪರಿಸ್ಥಿತಿಯನ್ನು ಸುಸ್ಥಿತಿ ಎಂದೂ ಹೇಳಬಹುದು, ದುಃಸ್ಥಿತಿಯೆಂದೂ ಹೇಳಬಹುದು. ಈ ನೆಪದಲ್ಲಾದರೂ ಒಡ್ಡೊಡ್ಡಾಗಿರುವ ನಮ್ಮಂತಹವರು ಆಸ್ಥೆಯಿಂದ ಅಲಂಕರಿಸಿಕೊಂಡು ಆತ್ಮರತಿಗೊಳ್ಳುವುದು ಒಂದೆಡೆಯಾದರೆ ಮನಸ್ಸಿಲ್ಲದಿದ್ದರೂ ಅಲಂಕರಿಸಿಕೊಳ್ಳಲೇ ಬೇಕಾದ ಕರ್ಮ ಇನ್ನೊಂದೆಡೆ. ಹೋಗಲಿ ಬಿಡಿ, ಇದೀಗ ನಿರ್ದಯವಾಗಿ ಹಣಕುವ ಬೆಳ್ಳಿ ಕೂದಲನ್ನು ದುಬಾರಿ ಹೇರ್‌ಡೈಯಿಂದ ಕಪ್ಪಾಗಿಸಿದ್ದಂತೂ ಆಗಿತ್ತು. ಮುಂದಿನ ಹಂತ ಕಪಾಟಿನಲ್ಲಿರೋ ರೇಷ್ಮೆ ಸೀರೆಗಳು; ಬ್ಯಾಂಕಿನ ಉಕ್ಕಿನ ಡಬ್ಬಿಗಳಲ್ಲಿ ಕಾಪಿಟ್ಟ ಹೊನ್ನು; ಮನೆಯ ಡಬ್ಬಿಯಲ್ಲಿ ಮುಚ್ಚಿಟ್ಟಿರೋ ಮ್ಯಾಚಿಂಗ್ ಬಳೆಗಳನ್ನು ಬಂಧನದಿಂದ ಬಿಡಿಸಿ ತಂದು ಬೆಳಕಲ್ಲಿ ಮೆರೆಸುವುದು ಮತ್ತು ಅದಕ್ಕಾಗಿ ಅವುಗಳ ಯೋಗ್ಯತೆ ಪರಿಶೀಲಿಸಿ ಯಾವಯಾವ ಸಂದರ್ಭಕ್ಕೆ ಯಾವ್ಯಾವುದನ್ನು ಸೆಟ್ ಮಾಡಿ ಧರಿಸಬೇಕು; ಇನ್ನೆಷ್ಟು ಶಾಪಿಂಗ್ ಮಾಡಿ ಹಣ ಪೋಲು ಮಾಡಬಹುದೆಂಬುದನ್ನು ನಿರ್ಧರಿಸಿ ಕಾರ್ಯೋನ್ಮುಖಳಾಗುವುದು ಬಾಕಿಯಿದೆ. ಪಾರ್ಲರ್ ಸಂಸ್ಕೃತಿಗೆ ಒಗ್ಗಿಕೊಂಡವರಿಗಂತೂ ಇವೆಲ್ಲದರೊಟ್ಟಿಗೆ ಮೆನಿಕ್ಯೂರ್, ಪೆಡಿಕ್ಯೂರ್, ಫೇಶಿಯಲ್, ಐಬ್ರೋ ಮುಂತಾಗಿ ಮಾಡಿಸಿಕೊಳ್ಳುವ ತರಾತುರಿ. ಸಧ್ಯ, ನನಗೆ ಅಂತಹ ಖಯಾಲಿಯೇನೂ ಇಲ್ಲದ್ದರಿಂದ ನಿವೃತ್ತ ಪತಿರಾಯರ ಜೊತೆಗೆ ಅವರ ನಿವೃತ್ತ ಪರ್ಸೂ ಬಚಾವು. ಇನ್ನೇನು ಹಿರಿಯ ನಾಗರಿಕ ಪಟ್ಟವನ್ನಲಂಕರಿಸುವ ಹುಮ್ಮಸ್ಸಿನಲ್ಲಿರುವ ನಾನು ತಲೆಯಲ್ಲಳಿದು ಉಳಿದಿರುವ ಬೆಳ್ಳಿ ಕೇಶಕ್ಕೇ ಬಣ್ಣ ಬಳಿದು ಮತ್ತೆ ಯೌವನಭರಿತಳಾದ ಸಂತೃಪ್ತಿಯಲ್ಲಿ ತೇಲುತ್ತಾ ಮದುವೆಯ ತಯಾರಿಯಲ್ಲಿ ತೊಡಗಿದ್ದಾಗಿತ್ತು.

ಮಹಾನಗರಿಯ ಮದುವೆಯೆಂದ ಮೇಲೆ ಕೇಳುವುದುಂಟೇ, ಸ್ವಲ್ಪವೂ ಅಲಕ್ಷ್ಯ ಮಾಡುವಂತಿಲ್ಲ. ಸಾಕಷ್ಟು ಪೂರ್ವ ತಯಾರಿಯೊಂದಿಗೆ ಭರ್ಜರಿ ತಯಾರಾಗಿ ಶಾಲಾ ಗೆಳತಿ ಕಲ್ಪಿ ಮಗಳ ಮದುವೆಗೆ ಹುಮ್ಮಸ್ಸಿನಲ್ಲಿ ಬಂದಿಳಿದಿದ್ದೆ.ಶಾಲೆ ಬಿಟ್ಟ ಮೇಲೆ ಚೆದುರಿ ಹೋಗಿದ್ದ ಗೆಳತಿಯರೆಲ್ಲರೂ ಅಲ್ಲಿ ಸಂಧಿಸಿದ್ದರಿಂದ ಸಂಭ್ರಮದ ವಾತಾವರಣ ಮದುವೆಯ ಸಮಾರಂಭದಲ್ಲಿ ದ್ವಿಗುಣಗೊಂಡಿತ್ತು. ಸ್ಕರ್ಟು, ಫ್ರಾಕಿಂದ ಭಡ್ತಿ ಪಡೆದು ಲಂಗಾದಾವಣಿ–ಮ್ಯಾಕ್ಸಿ–ಬೆಲ್ ಬಾಟಮ್ ಸೀರೆಗೆ ಶಿಫ್ಟ್ ಆಗೋ ಹೊತ್ತಿಗೆ ಎತ್ತೆತ್ತಲೋ ಚದುರಿ ಹೋಗಿದ್ದ ಗುಂಪನ್ನು ಕಲ್ಪಿ ಮಗಳ ಮದುವೆ ಸುಮಾರು ಮೂವತ್ತೈದು ವರ್ಷಗಳ ನಂತರ ಮತ್ತೆ ಒಗ್ಗೂಡಿಸಿತ್ತು. ಆರನೇ ಇಯತ್ತೆಯಲ್ಲಿದ್ದಾಗ ಎಲ್ಲರೂ ಸೇರಿ ನಾವ್ ನಾವೇ ಅಪ್ಪನ ಸೈಕಲ್ ಹೊಡೆಯಲುಕಲಿತದ್ದು; ಲಗೋರಿ, ಗೋಲ್ಡನ್ ಪ್ಲೇ, ಸ್ಕಿಪ್ಪಿಂಗು, ರಿಂಗು ಮುಂತಾದ ಆಟವಾಡುತ್ತಿದ್ದ ಮಜಾ... ಎಲ್ಲರೂ ಸೇರಿ ಮಾಡಿದ ''ಸಗ್ಗದ ಸಿರಿ ಬಂತು ನಮ್ಮೂರಿಗೆ' ಜಾನಪದ ನೃತ್ಯ; ಆಗಿನ ಹಿಟ್ ಚಲನಚಿತ್ರ 'ಬಾಬಿ'ಯ ಝೂಟ್ ಬೋಲೆ ಕವ್ವಾ ಕಾಟೇ ಮತ್ತು ನ ಚಾಹು ಸೋನಾ ಚಾಂದಿ ಹಾಗೂ ಮರಾಠಿಯ ಸುಪ್ರಸಿದ್ಧ ' ಮೀ ಡೋಲ್ಕರ...' ಸಮೂಹ ನೃತ್ಯ; ಕವ್ವಾಲಿ ಮುಂತಾದ ಸವಿ ನೆನಪುಗಳ ತಾಜಾತನದ ಅಲೆಯಲ್ಲಿ ತೇಲುತ್ತಾ ಬಾಲ್ಯಕ್ಕೆ ಜಾರಿ ಸಂತಸದಿಂದ ಹರಟುತ್ತಿದ್ದೆವು. ಅಷ್ಟರಲ್ಲಿ ಮೀರಿ ಉದ್ಗರಿಸಿದ್ದಳು 'ಅಲ್ವೇ ಲತೀ, ತಲೆಗೆ ಎರ್ಕೊಂಡು ಕೂದಲು ಒಣಗಿಸೋಕೆ ಮಹಡಿ ಮೇಲೆ ಬಿಸಿಲಲ್ಲಿ ನಿಲ್ತಿದ್ಯಲ್ಲೇ... ಉದ್ದ, ನೇರ ರೇಷ್ಮೆಯಂತಹ ಹೊಳೆಯುವ ಕೂದಲನ್ನು ನೋಡಿ ಅದೆಷ್ಟು ಹೊಟ್ಟೆಕಿಚ್ಚಾಗ್ತಿತ್ತು ಗೊತ್ತೇನೇ...' ಅವಳಂದದ್ದು ಕೇಳಿ ಈಗ ಕೂದಲುದುರಿದ ಸಂಕಟ ಮರೆತು ಆಗ ನನಗೂ ಉದ್ದನೆಯ ಚೆಂದದ ಕೇಶರಾಶಿಯಿತ್ತು ಎನ್ನುವ ನೆನಪೇ ಹಿತವೆನ್ನಿಸಿತ್ತು. ಈಗಿನವರು ಪಾರ್ಲರ್‌ಗೆ ದುಡ್ಡು ಸುರಿದುಕೂದಲನ್ನು ಪೊರಕೆಯಂತೇ ನೆಟ್ಟಗೆ ಮಾಡಿಸಿಕೊಳ್ಳುತ್ತಾರಲ್ಲಾ ಅದಕ್ಕಿಂತಲೂ ಚೆಂದದ ನೇರ, ದಟ್ಟಕೇಶ ರಾಶಿಯಿತ್ತು. ಸಾಲದ್ದಕ್ಕೆ ಮೇಂಟೆನೆನ್ಸ್‌ಗೂ ದುಡ್ಡು ಸುರಿಯುವ ದರ್ದು ಇಂದಿನವರದ್ದಾದರೆ ನನ್ನ ಕೇಶಕ್ಕದಾವುದೂ ಬೇಕಿರಲಿಲ್ಲ, ನೈಸರ್ಗಿಕವಾಗಿಯೇ ನೇರ ದಿಟ್ಟ ನಿರಂತರವಾಗಿತ್ತು!

-----

ಗೆಳತಿಯ ಹೊಗಳುವಿಕೆ ಸಾರ್ಥಕ್ಯಭಾವ ಮೂಡಿಸಿ ಅಳಿದುಳಿದ ಕೇಶವನ್ನು ರಾಶಿಯಾಗಿಸಲು ಬೆಳಗ್ಗೆ ಹಮ್ಮಿಕೊಂಡ ಕಸರತ್ತಿನ ನೆನಪು ತರಿಸಿತ್ತು. ಯಾವುದೇ ಸಮಾರಂಭವಿರಲಿ ಆ ದಿನದಂದು ತಲೆಸ್ನಾನ ಕಡ್ಡಾಯ. ತಲೆಸ್ನಾನದಿಂದಾಗಿಇರುವ ನಾಲ್ಕೇ ನಾಲ್ಕು ಕೂದಲು ಎಂಟಾದ ಭಾವದಲ್ಲಿ ಪರಮಾನಂದವಿದೆ. ಒಣಗಿದ ಹುಲ್ಲಂತಾದ ಕೂದಲನ್ನು ಅಲ್ಲಲ್ಲಿ ಪಿನ್ನುಗಳಿಂದ ಬಂಧಿಸಿ ಪುಗ್ಗದಂತೇ ಉಬ್ಬಿಸಿ ಇಲೀ ಬಾಲದಂತಿದ್ದದ್ದನ್ನು ಇಣಚಿಯ ಬಾಲವಾಗಿಸಲು ಹರಸಾಹಸ ನಡೆಸಿ ಯಶಸ್ಸಿನ ಭ್ರಾಂತಿಯಲ್ಲಿ ತೇಲುತ್ತಾ ಸುಖಿಸುತ್ತಿದ್ದದ್ದೂ ಒಂದು ರೀತಿಯಲ್ಲಿ ಭ್ರಮೆಯೇ! ಇಷ್ಟೇ ಅಲ್ಲದೇ ವಯೋಸಹಜ ಬಿಳೀ ಕೂದಲನ್ನು ಕಪ್ಪಾಗಿಸಲೂ ಎರಡು ದಿನಗಳ ಮೊದಲೇ ಕಸರತ್ತು ನಡೆಸುತ್ತಿದ್ದದ್ದೂ ಉಂಟು. ಆದರೆ ಈ ಕಷ್ಟ ಹತ್ತಿರದವರ ಸಮಾರಂಭಗಳಿಗೆ ಮಾತ್ರ. ದೂರದ ಸಮಾರಂಭಗಳಿಗೆ ಈಗಿನವರ ಫ್ಯಾಶನ್ ಮಂತ್ರವಾದ 'ಸಾಲ್ಟ್ ಪೆಪ್ಪರ್' ಲುಕ್‌ಗೇ ನಿರ್ಭಿಡೆಯಿಂದ ಆತುಕೊಳ್ಳುತ್ತಿದ್ದೆ. ಇಂದಿನ ಯುವಜನಾಂಗ ದುಡ್ಡು ಸುರಿದು ಕಪ್ಪುಕೂದಲಿಗೆ ಬಿಳೀ ಕೆಂಚು ಬಣ್ಣ ಬಳಿಸಿಕೊಂಡು ಫ್ಯಾಶನ್

ಮಂತ್ರ ಜಪಿಸಿದರೆ ಅವರ ಹಿಂದಿನ ತಲೆಮಾರಿನವರಾದ ನಾವು ದೈವದತ್ತವಾಗಿ ಒಲಿದು ಬಂದ 'ಹಂಡಬಂಡ' ಲುಕ್ಕನ್ನು ಮತ್ತೆ ದುಡ್ಡು ಸುರಿದು ಕಾರ್ಮೋಡವಾಗಿಸಲು ಹೆಣಗುತ್ತಿದ್ದೇವಲ್ಲ ಇದಕ್ಕೇನೆನ್ನಬೇಕು? ಮನುಷ್ಯಜನ್ಮಕ್ಕೆ ತೃಪ್ತಿ ಎನ್ನುವುದೇ ಇಲ್ಲವೇನೋ. ಹಾಂ! ಬಣ್ಣ ಅಂದದ್ದೇ ನೆನಪಿಗೆ ಬಂತು ನೋಡಿ... ಗುಟ್ಟು ಮಾಡುವ ಕಾಲ ಅದೊಂದಿತ್ತು. ಮೂರೂವರೆ ದಶಕಗಳ ಹಿಂದೇನೇಕೂದಲಿಗೆ ಬಣ್ಣ ಹಚ್ಚಿಕೊಂಡು ನೋಡೋಕೆ ಬಂದು ನನ್ನನ್ನು ಹಳ್ಳಕ್ಕೆ ಅಲ್ಲಲ್ಲಾ ಖೆಡ್ಡಕ್ಕೆ ಬೀಳಿಸಿದ ಗೌರವರ್ಣದ ವರಮಹಾಶಯರ ಚಿದಂಬರ ರಹಸ್ಯ ಮದುವೆಯಾಗಿ ಎಷ್ಟೋ ದಿನಗಳ ನಂತರದಲ್ಲಿ ಅನಾವರಣಗೊಂಡಿತ್ತು. ಬಿಡಿ, ಅಕಾಲ ನೆರೆಗೆ ಅವರಾದರೂ ಏನು ಮಾಡಿಯಾರು? ಆ ಕಾಲದಲ್ಲಿ ಮುಪ್ಪಿನ ಸಂಕೇತವಾದ ಬೆಳ್ಳಿ ಕೂದಲನ್ನು ಗುಟ್ಟಾಗಿ ಬೇರು ಸಹಿತಕಿತ್ತು ಬಿಸಾಡುವವರು ಒಂದೆಡೆಯಾದರೆ ಕಿತ್ತಿದರೆ ದ್ವಿಗುಣಗೊಳ್ಳುತ್ತದೆಂಬ ನಂಬಿಕೆಗೆ ಜೋತು ಬಿದ್ದವರು ಕಾಡಿಗೆಯೋ ಮತ್ತೊಂದೋ ಹಚ್ಚಿಕೊಂಡು ಮರೆ ಮಾಚುತ್ತಿದ್ದರು. ಇನ್ನು ಕೆಲವರು ಅತೀ ಬುದ್ಧಿವಂತರಿಗೆ ಮಾತ್ರ ಅಕಾಲ ನೆರೆ ಆಗುವುದು ಎಂದು ಬೀಗುತ್ತಿದ್ದರು. ಆದರೆ ಇಂದು ಅದೇ ಬಿಳೀ ಕಪ್ಪು ಮಿಶ್ರಣದ ಕೇಶವಿನ್ಯಾಸ ಫ್ಯಾಷನ್ ಎನ್ನಿಸಿ ಬಿಟ್ಟಿದೆ. ಕಾಲಾಯತಸ್ಮೈ ನಮಃ!

ಸಂಬಂಧ, ವಸ್ತು, ಬಣ್ಣ, ಎತ್ತರ, ಆರೋಗ್ಯ ಹೀಗೇ ಯಾವುದರದ್ದೇ ಆಗಲಿ ಅಭಾವವುಂಟಾದಾಗ ಮಾತ್ರ ಅದರ ಮಹತ್ವ ಅರಿವಾಗುತ್ತದೆ. ಅದಕ್ಕಾಗಿ ಮನ ತುಡಿಯುವುದು ಮನುಷ್ಯ ಸಹಜಗುಣವೆಂಬ ನೀತಿಗೊತ್ತಿದ್ದರೂ ನನ್ನರಿವಿಗೆ ಬಂದದ್ದು ಶರದೃತುವಿನಲ್ಲಿ ತರಗಲೆಗಳು ಉದುರುವ ವೇಗದಲ್ಲಿ ನನ್ನ ಶಿರದ ಕೂದಲು ಉದುರುದುರಿ ಬೋಳಾಗುವ ಹಂತತಲುಪಿದಾಗಲೇ! ಅದುವರೆಗೂ ದಟ್ಟ ನೀಳಗೂದಲನ್ನು ಉಪೇಕ್ಷಿಸಿದ್ದರ ಪ್ರತಿಫಲವಾಗಿ ಬಡಿದೆಬ್ಬಿಸಿದಂತೆ ಎಚ್ಚೆತ್ತುಕೊಂಡು ಕಾರ್ಯೋನ್ಮುಖಳಾಗಿದ್ದೆ. ಮಿಂಚಿ ಹೋದಕಾರ್ಯಕ್ಕೆ ಚಿಂತಿಸಿ ಫಲವಿಲ್ಲವೆಂದು ಗೊತ್ತಿದ್ದರೂ ಮನ ಚಿಂತೆಯಗೂಡಾಗಿದೆ. ಆರೈಕೆಗೆ ಸ್ಪಂದಿಸುವಂತಹ ವಯಸ್ಸು ಇದಲ್ಲವೆಂಬ ವೇದಾಂತ ಗೊತ್ತಿದ್ದರೂ ಆರೈಕೆ ಜೋರಾಗಿಯೇಇದೆ. 'ಇರುವುದೆಲ್ಲವ ಬಿಟ್ಟು ಇರದುದನೆಡೆಗೆ ತುಡಿವುದೇ ಜೀವನ...' ಹೆಮ್ಮೆಯ ಸಾಹಿತಿ ಗೋಪಾಲಕೃಷ್ಣ ಅಡಿಗರ ಹಾಡನ್ನು ಗುನುಗಿಕೊಳ್ಳುವುದೂ ಹೆಚ್ಚಿದೆ. ■



# ದೇಖೊ....ಬೇಟಾ...!

● **ಗುಂಡುರಾವ್ ದೇಸಾಯಿ**

ಪದ್ದು ಒತ್ತಡದಾಗ ಇದ್ದ...ಏನೋ ಮನೆಯ ಕಿರಿ ಕಿರಿ....ಹೇಳಿಕೊಳ್ಳಲಾರದಂತಹ ಸಂಕಟ. ಏನೆಲ್ಲ ಪ್ರಯತ್ನ ಮಾಡಿದರೂ ಆ ಸಂಕಟದಿಂದ ಹೊರಗೆ ಬರಲಿಕ್ಕೆ ಆಗಲಿಲ್ಲ..ನನ್ನ ಹತ್ತಿರ ಬಂದಾಗ "ದಾಯಾದಿಗಳ ಕಲಹ ..ಎಲ್ಲಾ ಕಾಲಕ್ಕೂ ಇದ್ದುದ್ದೆ. ಆರೋಗ್ಯ ಮುಖ್ಯ.. ಬೇಕಾದಂಗ ನೌಕರಿ ಇದೆ..ಮುಂದೆ ಇಂತಹವನ್ನು ಬೇಕಾದಷ್ಟು ಮಾಡಬಹುದು...ಬಿಟ್ಟಾಕು" ಎಂದು ಧೈರ್ಯ ತುಂಬಿದ್ದರೂ ಸಮಾಧಾನವಾಗಿರಲಿಲ್ಲ.. ಹೆಂಡತಿ ತವರಿಗೆ ಹೋಗಿದ್ದಳು ಬೇರೆ.."ಮೊದಲು ಊರಿಗೆ ಹೋಗಿ ನಾಲ್ಕುದಿನ ರೆಸ್ಟ ಮಾಡಿ ಎಲ್ಲಾ ಸುಧಾರಿಸುತ್ತೆ"ಎಂದೆ..

"ಆಯ್ತು" ಎಂದು ಬಸ್ ಹತ್ತಿದ..ಯಾವುದೋ ಊರಿನ ನಿಲ್ದಾಣದಾಗ ಬಸ್ ನಿಲ್ಲಿಸಿದಾಗ ಸ್ಟ್ಯಾಂಡಿನಲ್ಲಿನ ಬೋರ್ಡ ಒಂದು ಆಕರ್ಷಿಸಿತು. 'ಹಿಮಾಲಯದಲ್ಲಿ ತಪ್ಪಸ್ಸು ಮಾಡಿ ಬಂದ ಜ್ಯೋತಿಷಿ ಬಾಬಾ ನಿಮ್ಮ ಕಷ್ಟಕ್ಕೆ ಕೇವಲ ಎರಡ ದಿನಗಳಲ್ಲಿ ಪರಿಹರಿಸುತ್ತಾರೆ...ನೇರವಾಗಿ ......ಲಾಡ್ಜನಲ್ಲಿ ಬೇಟಿಯಾಗಬಹುದು ಇಲ್ಲವೇ... ಕರೆ ಮಾಡಿಯೂ ಕೇಳಬಹುದು..' ಎಂದಿತ್ತು. ಲಾಡ್ಜಗೆ ಹೋಗೊಣ ಎಂದರೆ ವಿಳಾಸ ಇರಲಿಲ್ಲ...ಒಂದು ಸಾರಿ ಇಲ್ಲಿಯೂ ಪ್ರಯತ್ನ ಮಾಡೋಣ ಅಂತ ಕರೆ ಮಾಡಿದ ಪದ್ದು..

"ಬೋಲೋ ಬೇಟಾ ಪದ್ದು..ಆರಾಮ ಹೋ...".ಅಂತ ಧ್ವನಿ ಬಂತು

ಪದ್ದು ಸ್ಟನ್ ಆದ..ಜ್ಯೋತಿಷಿಗಳು ನನ್ನ ಹೆಸರೂ ಹೇಳತಿದ್ದಾರೆ..! 'ಇವರು ಅಸಮಾನ್ಯರೂ!' ಅಂತ ಪಟ್ಟ ಕಟ್ಟಿದ..ಟ್ರೂ ಕಾಲರ್‌ನಲ್ಲಿ ಎಲ್ಲಾ ಗೊತ್ತಾಗುತ್ತೆಂದು ತಿಳಿಯದೆ..

"ಬಾಬಾ, ತಮಗೆ ನನ್ನ ಹೆಸರು ಹೇಗೆ ಗೊತ್ತಾಯಿತು?"

"ದೇಖೊ ಬೇಟಾ ಹಮ್ ಹಿಮಾಲಯಮೇ ತಪ್ಪಸ್ಯಾ ಕರಕೆ ಆಯೆ ಹೈ....ಹಮ್ ಕೋ ಸಭಿ ಮಾಲೂಮ ಹೋತಾ ಹೈ..ನಿನಗೆ...ಮನೆಯವರಿಂದ ತುಂಬಾ ತೊಂದರೆ ಇದೆಲ್ಲಾ ಬೇಟಾ"ಎಂದರು ಮೆದು ಧ್ವನಿಯಲ್ಲಿ

"ಹಾಂ..ಹೌದೌದು....ಬಾಬಾ..ಅದು ಹೇಗೆ ಗೊತ್ತಾಯ್ತು...."

"ಬೇಟಾ ದೇಖೊ ಹಮ್ ಸರ್ವಂತರಾಮಿ ಹೈ.. ನಮಗ ಎಲ್ಲವೂ ಗೊತ್ತಾಗುತ್ತೆ.. ವಾರದಿಂದ ಬಹಳ ದುಃಖದಲ್ಲಿದ್ದಿಯಾ...ಏನು ಮಾಡೋಕೆ ತಿಳಿತಿಲ್ಲ..ಮಲಗಿದ್ರೆ ನಿದ್ದೆ ಬರತಿಲ್ಲ..ಊಟ ಸೇರತಿಲ್ಲ ನಿಜನಾ ಬೇಟಾ..?"

"ಹೌದು ಬಾಬಾ...ನಿಮಗೆ ಶರಣಾದೆ..ನನ್ನ ಕಷ್ಟ ಪರಿಹರಿಸಿ....."

"ಹಮಕೋ ಮಾಲೂಮ ಹೈ.......ಈಗ ಸಮಸ್ಯೆ ಹೇಳು..."

ಪೆದ್ದ ಪದ್ದು....ಇದ್ದ ವಿಷಯವನ್ನೆಲ್ಲಾ ಬಾಯಿಬಿಟ್ಟ....

"ದೇಖೊ ಬೇಟ...ಯಹಿ ಕಠಿಣ ಮಾಮಲಾ ಹೈ..ಇಸ್ಕೇಲಿಯೆ ಏಕ್ ಯಾಗ ಕರನಾ ಚಾಹಿಯೆ...ಆಜ್ ರಾತ ಮೈ ಕರೂಂಗಾ..."

“ಆಯ್ತು ಬಾಬಾ..... ಆಗಲಿ ಆಗಲಿ...”

“ಬೇಟಾ, ಯಾಗ ಕರನೆ ಕೆಲಿಯಾ ಕುಚ್ ಕರನಾ ಪಡತಾ ಹೈನಾ?”

“ಆಯ್ತು ಬಾಬಾ ಎಷ್ಟು ಹಾಕಲಿ ಹೇಳಿ...?

“ಅಬ್ ದಸ್ ಹಜಾರ್ ಡಾಲೋ.. ಸಭಿ ಕಷ್ಟ ಪೂರಾ ಹೋ ಜಾಯೆಗಾ”

ಕಷ್ಟ ಕಡಿಮೆ ಆಗುತ್ತೆ ಅಂದ್ರೆ..ಯಾರಿಗೆ ಖುಷಿ ಇರಲ್ಲ...ಅವರು ಕೊಟ್ಟ ಅಕೌಂಟ್ ನಂಬರ್‌ಗೆ ದುಡ್ಡು ಹಾಕಿದ....ಮನಸ್ಸು ಹಗುರಾಗಿತ್ತು..

ಮತ್ತೆ ಫೋನ್ ಮಾಡಿ “ಏಕ್ ಮಂತ್ರ ಮೈ ಅನುಸಂಧಾನ ಕರ್ ರಹಾ ಹುಂ, ಕೈಸೆ ಹೋ ರಹಾ ಹೈ ಮನಮೆ..”

ಬಾಬಾನ ಸಮ್ಮೋಹನಕ್ಕೆ ಒಳಗಾಗಿದ್ದ ಪದ್ದು ಖುಷಿಯಿಂದ “ಹೌದು ಬಾಬಾ ಈಗ ಅರಾಮ ಅನಸ್ತಿದೆ” ಅಂದ....

“ದೆಖೊ..ರಾತ ಮೇ ಕೈಸಾ ಕರತಾ ಹೂಂ..” ಅಂತ ಕಟ್ ಮಾಡಿದ..

ಪದ್ದುಗೆ ಸ್ವಲ್ಪ ಭಯ ಕಡಿಮೆಯಾಗಿತ್ತು.. ಬಾಬಾನ ಮಾತಿನ ಮೋಡಿಯ ಬಲಿಯಲಿ ಬಿದ್ದಿದ್ದ...ಅಷ್ಟರಲ್ಲೆ ನನ್ನ ನೆನಪಾಗಿ ಕರೆಮಾಡಿ “ಇವತ್ತು ನನ್ನ ಕಷ್ಟನ ಪರಿಹಾರ ಆಯ್ತು.....” ಎಂದ.

“ಖುಷಿ ವಿಷಯಪ...ಏನು ನಿಮ್ಮ ದಾಯಾದಿಗಳು...ಬಿಟ್ರಾ ಎಲ್ಲಾ..”

“ಇಲ್ಲ ದೋಸ್ತಾ..ಅಬ್ಬ ಬಾಬಾನ ನಂಬರ್ ಸಿಕ್ಕಿತ್ತು..ಫೋನ್ ಮಾಡಿದೆ..ಇವತ್ತೆ ನಿಮ್ಮ ಸಮಸ್ಯೆಗೆ ಪರಿಹಾರ ಮಾಡ್ತೀನಿ...ನನ್ನ ಬಗ್ಗೆ ಎಲ್ಲಾ ಹೇಳಿಬಿಟ್ಟಾ..ನನ್ನ ಹೆಸರು ಸಹಿತ” ಎಂದ

“ಅಯ್ಯೋ ಹುಚ್ಚಾ ,,..ಅವರು ಭವಿಷ್ಯ ಅವರಿಗೆ ಗೊತ್ತಿದ್ರ ಅವರ್‍ಯಾಕ ಈ ದಂಧೆಗೆ ಇಳಿತಿದ್ರು...? ಮೊಬೈಲ್‌ನ್ಯಾಗ ಕಾಲರ್ ಐಡಿಯಲ್ಲಿ ನಿನ್ನ ಹೆಸರು ಎಲ್ಲಾ ಬರುತ್ತೆ. ಮೊದಲ ಕಷ್ಟದಾಗ ಒದ್ದಾಡತಿರೊ ನಮಗೆ, ಜ್ಯೋತಿಷಿಗಳು ಹೇಳುವ ಹತ್ತರಲ್ಲಿ ಕೇಳುವ ನಾಲ್ಕೈದು ಪ್ರಶ್ನೆಗಳು ಸಾಮಾನ್ಯ ಸಮಸ್ಯೆಗಳ ಆಗಿರತಾವ..ಮೊದಲೆ ಕುಗ್ಗಿರತಿವಿ ಅವರ ಸಮಾಧಾನ ಮಾತಗಳಿಗೆ ನಾವು ಬೀಳತೀವಿ” ಎಂದೆ.

ನನ್ನ ಮಾತು ಕೇಳುವ ವ್ಯವಧಾನ ಇರಲಿಲ್ಲ....”ನಿನಗೆ ಒಳ್ಳೆ ಹೇಳಿದೆ...! ಖುಷಿನ ಪಡಲ್ಲ.. ಬರಿ ಎಡವಟ್ಟ ಮಾತಾ. ಇಲ್ಲ..ಇಲ್ಲ ಅವರು ಒಳ್ಳೆ ಬಾಬಾ ಅನಸ್ತದ....”

“ಆಯ್ತು... ಎಷ್ಟು ಹೀರಿದ್ರಪ ಪರಿಹರಸಾಕ?”

“ಹತ್ತು ಸಾವಿರ ಹಾಕಿಬಿಟ್ಟೆ ಆಗಲೆ ಅಕೌಂಟಿಗೆ ಇವತ್ತು.....ರಾತ್ರಿ ಯಾಗಾ ಮಾಡ್ತಾರಂತೆ”

“ಅಯ್ಯೋ ಎಂತಹಾ ಮನುಷ್ಯನಯ್ಯ ದುಡ್ಡು ಕೊಟ್ರೆ ಎಲ್ಲಾ ಪರಿಹಾರ ಆಗುವಂಗೆ ಇದ್ರೆ.... ಜಗತ್ತಿನ್ಯಾಗ ಕಷ್ಟಗಳೆ ಇರತಿರಲಿಲ್ಲ”

“ನಿನಗ ಯಾವುದರಲ್ಲಿ ನಂಬಿಕೆ ಇಲ್ಲ...ಹೋಗಿ ಹೋಗಿ ನಿನಗ ಹೇಳಿದೆ...”ಎಂದ

"ಹಿಂದಕನೂ ಸರಳ ವಾಸ್ತು ಮನೆಗೆ ಮಾಡಿಸಿದಿ ಅಲ್ಲಪ ಕಷ್ಟಗಳು ಪರಿಹಾರ ಆದ್ವಾ....."

"ಒಂದು ವಾರ ಆಗಿತ್ತು"

"ಕರ್ಮ...ನಗಡಿ ಬಂದ್ರ ಗುಳಿಗೆ ತೊಗೊಂಡ್ರು..ತೊಗೊಳ್ಳಿಕ್ರೂ ವಾರದಾಗ ಕಡಿಮೆ ಆಗುತ್ತೆ...ಹಾಗೆ ಕಷ್ಟಗಳು..ಸಹಜವಾಗಿ ಆಗೋದನ್ನ ಅಂತವರಿಗೆ ಕ್ರೆಡಿಟ್ಟ ಕೊಡ್ತಿಯಲ್ಲೋ...."

"ನೀನು ಏನೆ ಅನ್ನು, ಬಾಬಾ ನನ್ನ ಪಾಲಿನ ದೇವರು"

"ಆಯ್ತು..ನಿನಗ ಸಮಾಧಾನ ಆಗುತ್ತೆ ಅಂದ್ರ...ನಾನು ಯಾಕ ಅಡ್ಡಾಗಲಿ...ಬೇಗ ಆ ಕಷ್ಟಗಳಿಂದ ದೂರ ಆಗು...ಆದ್ರ ಒಂದು ವಿಷಯ...!"

"ಏನೋ...?"

"ಮತ್ತೆ ನಾಳೆ ಆ ಬಾಬಾ ಬೇಡಿಕೆ ಇಡ್ತಾನ... ಆಗ ನೀನು ಜಾಗೃತನಾಗು" ಎಂದೆ

"ನೀನು ಹುಚ್ಚ ಇದ್ದಿ...ಬಾಬಾ ಮತ್ತೆ ಮಾಡಲ್ಲ...ಇವತ್ತೆ ಕಷ್ಟ ಪರಿಹರಿಸ್ತಾನ"

"ಆಯ್ತು...ಇಷ್ಟಕ್ಕೆ ಮಾಡಿದ್ರ ಓಕೆ ನಾಳೆ ಫೋನ್ ಮಾಡಿ ಬೇಡಿಕೆ ಇಟ್ರ ....ಬಲಿಬೀಳಬೇಡ" ಅಂದೆ

"ಆಯ್ತು...ಉಪದೇಶ ಸಾಕು ಇಡು..."ಎಂದು ಫೋನ ಕಟ್ ಮಾಡಿದ

ಪದ್ದುಗ ತನ್ನ ಕಷ್ಟಗಳು ಪರಿಹಾರ ಆಗಲಿ ಅನ್ನುವುದೆ ಚಿಂತೆ...ಮನಸ್ಸೆಲ್ಲ..ಬಾಬಾನ ಫೋನ ಕಡೆ..ಬಾಬಾ ಒಳ್ಳೆ ಮನುಷ್ಯನಂತೆ ಕಂಡಿದ್ದ...'ಏನು ಮಾಡತಿರಬಹುದು...?.ಏನೆಲ್ಲಾ ಯೋಚನೆ..ಇವತ್ತೊಂದಿನ ಮುಗಿತು ಅಂದ್ರೆ ನಾಳೆಯಿಂದ ನೆಮ್ಮದಿ ನನಗೆ'ಎಂದು ನಿಟ್ಟುಸಿರು ಬಿಟ್ಟ....ಹಾಗೆ ಮಲಗಿದ ನಿದ್ದೆ ಬರುತ್ತಿಲ್ಲ...ಒದ್ದಾಡಿ ನಿದ್ದೆ ಹತ್ತಬೇಕು ಅನ್ನುವಷ್ಟರಲ್ಲಿ ಕರೆ ಬಂತು ನೋಡಿದ ಬಾಬಾಂದು.

"ಬೇಟಾ..ಮಲಗಿದ್ದೀಯಾ?"

"ಇಲ್ಲ ಬಾಬಾ ..ಹೇಳಿ ಯಾಗ ಮುಗಿತಾ?"

"ಬೇಟಾ...ಮಾಡತಾ ಇದ್ಧೀನಿ ಆದರೆ ವೋ ಲೋಗ್ ಬಹುತ್ ಶಕ್ತಿಶಾಲಿ ಹೈ..! ಮೈ ಕ್ಯಾ ಕರ್ ರಹಾ ಹುಂ..ಉಸಕೋ...ಉತ್ತರ ದೇ ರಹೆ ಹೈ...."

"ಏನಾಯಿತು ಬಾಬಾ!" ಗಾಭರಿಯಿಂದ ಕೇಳಿದ ಪದ್ದು

"ಇಲ್ಲ ಬೇಟಾ...ವೊ ಲೋಗ್ ಭಿ ಯಾಗ ಕರ್ ರಹೆ ಹೈ ?...ತೀನ್ ಲೋಗ್ ದಿಖಾ ರಹಾ ಹೈ? "

"ಇಲ್ಲ ಇಬ್ಬರೆ ನನಗೆ ವಿರುದ್ಧ ಆಗಿರೋರು"

"ಗೊತ್ತು ಬೇಟಾ...ಮತ್ತೊಬ್ಬ ಮಂತ್ರವಾದಿ ಹೈ..."

ಹಾಗಂದ ಕೂಡಲೆ ಅವನ ಮಾತಿಗೆ ಬಲಿಯಾದ "ಹೌದಾ....ನನ್ನ ವಿರುದ್ಧನ

ಕೆಲಸ ಮಾಡತಾ ಇದ್ದಾರ.. ಎಷ್ಟು ಸಹಾಯ ಮಾಡಿದ್ದೆ ಅವರಿಗೆ!"

"ಘೋಡೊ..ಅವರು ಉಗ್ರ ಯಾಗ ಮಾಡತಿದ್ದಾರೆ ಬೇಟಾ"

ಭಯಗೊಂಡ ಪದ್ದು "ಏನು ಮಾಡಬೇಕು..ಅದಕ್ಕೆ "ಎಂದ

"ಏಕ್ ಬಲಿ ದೇನಾ"

"ಬಲಿನಾ.? ಏನು ಕೊಡಬೇಕು"

"ಏಕ್ ಬಡಾ ಬಕರಿಕೊ...ಬಲಿದೇನಾ ಬೇಟಾ"

"ನಾನು ಎಲ್ಲಿ ಬರಲಿ ಹೇಳಿ ಬಾಬಾ..ನಾಳೆ ಬರತೀನಿ"

"ತುಮ್ ಆನಾ ಮತ್ ಬೇಟಾ..ಹಮ್ ಸ್ಮಶಾನ ಮೇ ಹೈ..ಆಜ್ ಹೀ ದೇನಾ"

"ಅಯ್ಯೊ ಇದುವರೆಗೂ ಪ್ರಾಣಿನ ಕೊಂದಿಲ್ಲ"

"ಹಮ್ ಮಾರತೆ ಹೈ...ನೀನು ವ್ಯವಸ್ಥೆ ಮಾಡು"

"ಏನು ಮಾಡಲಿ"

"ಬೇಟಾ...ಏ ಯಾಗ ಕಿಯಾ ತೋ ತುಮಾಹಾರಾ ಸಾರಿ ದುಃಖ ಹಲ್ ಹೋಜಾಯೇಗಾ...ಏಕ್ ಕಾಮ ಕರೋ..ಏಕ್ ಬೀಸ್ ಹಜಾರ ಮೇರಾ ಅಕೌಂಟ ಮೆ ದಾಲೋ..ಮೈ ವ್ಯವಸ್ಥಾ ಕರೂಂಗಾ"

ಇಪ್ಪತ್ತು ಸಾವಿರ ಹಾಕು ಅಂದ ಕೂಡಲೆ ಮನಸ್ಸು ಜಾಗೃತ ಆಯ್ತು...ಇವ ಹೀರಿಕೊಳ್ಳುವ ಬಾಬಾ ಅಂತ... ತಪ್ಪಿಸಿಕೊಳ್ಳಾಕ "ಬಾಬಾ ಇದ್ದುದ್ದೆಲ್ಲಾ ಹಾಕಿನಿ..ನನ್ನತ್ರ ಏನು ಇಲ್ಲ"

"ಅಯ್ಯೊ..ಯಾಗ ಅಂತಿಮ್ ಘಟ್ಟ ಮೇ ಹೈ..ಐಸಾ ಕರೊ ದಸ್ ಹಜಾರ ದಾಲೋ..ಬಾದಮೆ ದೇಖೆಂಗೆ..."

"ಬಾಬಾ ನನ್ನ ಸ್ಥಿತಿ ತಿಳಿಯಿರಿ..ನನ್ನ  ಹತ್ರ ಏನು ಇಲ್ಲ"

"ಪಾಂಚ ಹಜಾರ ತೋ ದಾಲೋ ಬೇಟಾ....ತುಮಾಹಾರ ಪತ್ನಿ ಸೇ ಪೂಚೋ..ಯಾ ಉಸಕಾ ನೆಕಲೆಸ್ ಬೇಚ ಕೆ ದೇದೊ..."

ಪದ್ದುಗ ಪಕ್ಕಾ ಆಯಿತು.. ನೂರು ರೂಪಾಯಿಗೂ ಬಿಡೊ ಆಸಾಮಿ ಅಲ್ಲ ಅಂತ.. ನಾನು ಹೇಳಿದ ಮಾತುಗಳು ನೆನಪಾದವು

"ಬೇಡ ಬಾಬಾ...ಆಗಲ್ಲ ಬಿಟ್ಟು ಬಿಡಿ..ಈಗ ನನಗೆ ಕಷ್ಟ ಪರಿಹಾರ ಆಗತಿದೆ.."

"ಬೇಟಾ ಐಸಾ ಮತ್ ಕರೋ ಎಕ್ ಹಜಾರ್ ತೋ ಹೈನಾ...?

ಪದ್ದು ಕಾಲ್ ಕಟ್ ಮಾಡಿದ...ಮಾಡಿದ್ರೂ ಫೋನ್ ರಿಂಗಾ ಆಗತಿತ್ತು.. ಸಿಟ್ಟಿಗೆದ್ದು...ಕಾಲ್‌ನ್ ಬ್ಲಾಕ್ ಲೀಸ್ಟಿಗೆ ಸೇರಿಸಿಬಿಟ್ಟ... ದಾಯಾದಿಗಳ ಆತಂಕವನ್ನು ಎದುರಿಸಬಹುದು ಈ ದೈತ್ಯರ ಆತಂಕ ಎದುರಿಸೋದು ಕಷ್ಟ ಎನಿಸಿ ನಿಟ್ಟುಸಿರುಬಿಟ್ಟ.

■